

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 | Issue : 173 | Saturday 15-03-2025 | E-mail : maruti.b.hosamani76@gmail.com | Page: 4 | Price : Rs. 1/-


## ರೇಣುಕಾ ಬಿರಾದಾರಗೆ ಒಲಿದು ಬಂದ ಸಾವಿತ್ರಿಬಾಯಿ ಪುಲೆ ಪ್ರಶಸ್ತಿ




**ಸಿಹಿ ಕಹಿ ಸುದ್ದಿ,**

**ಗೋಲಗೇರಿ :** ಸಿಂದಗಿ ತಾಲೂಕಿನ ಗೋಲಗೇರಿ ಗ್ರಾಮದ ಸುಪುತ್ರಿಯಾದ ಶ್ರೀಮತಿ ರೇಣುಕಾ ನೀ.ಬಿರಾದಾರ (ಡಾಂಗೆ) ರವರು ಕಲಬುರ್ಗಿಯ ಜಗತ್ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆ ಸಹ ಶಿಕ್ಷಕರಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಗಣನೀಯವಾಗಿ ಸೇವೆ ಸಲ್ಲಿಸಿರುವುದಕ್ಕೆ ಉತ್ತಮ ಶಿಕ್ಷಕಿ ಎಂದು ಪರಿಗಣಿಸಿ 2025 ನೇ. ಸಾಲಿನ ಕಲಬುರ್ಗಿಯ ಜಿಲ್ಲಾ ಮಟ್ಟದ ಸಾವಿತ್ರಿಬಾಯಿ ಪುಲೆ ಪ್ರಶಸ್ತಿ ನೀಡಿ ಗೌರವಿಸಿ ಸನ್ಮಾನಿಸಲಾಗಿದೆ.

ಮಾತೆ ಸಾವಿತ್ರಿಬಾಯಿ ಪುಲೆ ಜಯಂತೋತ್ಸವ ಅಂಗವಾಗಿ ಸಾವಿತ್ರಿಬಾಯಿ ಪುಲೆ ಶಿಕ್ಷಕಿಯರ ಫೆಡರೇಷನ್ (ರಿ) ನವ ದೆಹಲಿ ಕರ್ನಾಟಕ ಸಾವಿತ್ರಿಬಾಯಿ ಪುಲೆ ಶಿಕ್ಷಕಿಯರ ಸಂಘ ರಾಜ್ಯ ಘಟಕ ಧಾರವಾಡ, ಜಿಲ್ಲಾ ಘಟಕ ಕಲಬುರಗಿ ಹಾಗೂ ಪೂಜ್ಯ ಡಾ, ಶರಣಬಸಪ್ಪ ಅಪ್ಪಾ ಫ್ಯಾಮಿಲಿ ಟ್ರಸ್ಟ್ ದಾಸೋಹ ಮನೆ ಶರಣಬಸವೇಶ್ವರ ಸಂಸ್ಥಾನ ಕಲಬುರ್ಗಿ ಇವರ ಸಂಯೋಗದಲ್ಲಿ ಅಖಿಲ ಭಾರತ ಶಿವಾನುಭವ ಮಂಟಪದಲ್ಲಿ ಸಮಾರಂಭ ಕಾರ್ಯಕ್ರಮ ನೆರವೇರಿತು.

ಗೋಲಗೇರಿ ಹಾಗೂ ಸುತ್ತ ಮುತ್ತಲಿನ ಗ್ರಾಮಸ್ಥರಾದ ಬಸನಗೌಡ ಬಿರಾದಾರ್, ಸಂತೋಷ್ ಗೌಡ ಪಾಟೀಲ್ ಡಂಬಳ. ವೀರೇಂದ್ರ ಪಾಟೀಲ್, ಗೌಡಣ್ಣ ಆಲಮೇಲ, ಸಿದ್ದನಗೌಡ ಪಾಟೀಲ್, ಮಲ್ಲನಗೌಡ ಪಾಟೀಲ್, ಶ್ರೀಶೈಲ್ ಚಳ್ಳಗಿ, ಮಹೇಶ್ ಹುರಕಡ್ಲಿ , ಷಣ್ಮುಖ ಸಾತಿಹಾಳ, ಸೈಪನ್ ಸಾಬ್ ಕೋರವಾರ. ಸೈಪನ್ ಬಾಗವಾನ, ಮೈಬುಬ್ ಕೋರವಾರ, ಇವರ ಸಾಧನೆಗೆ ಹರ್ಷ ವ್ಯಕ್ತಪಡಿಸಿದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಮೈಬೂಬಬಾಷ.ಮನಗೂಳಿ.ತಾಳಿಕೋಟೆ**

## ದೈಹಿಕ ಶಿಕ್ಷಕರ ಸಂಘದಿಂದ ಅವಿರೋಧವಾಗಿ ಆಯ್ಕೆಯಾದ ಪದಾಧಿಕಾರಿಗಳಿಗೆ ಸನ್ಮಾನ



**ಸಿಹಿ ಕಹಿ ಸುದ್ದಿ,**

**ಕೂಡ್ಲಿಗಿ :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಕೂಡ್ಲಿಗಿ ಪಟ್ಟಣದಲ್ಲಿ ನಡೆದ 2024 ರಿಂದ 2029 ರ ಅವಧಿಯ ಚುನಾವಣೆಯಲ್ಲಿ ಗ್ರೇಡ್ – 1 ದೈಹಿಕ ಶಿಕ್ಷಣ ಶಿಕ್ಷಕರ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾದ

ಅಧ್ಯಕ್ಷರಾಗಿ ಬಿ.ಎಂ ಭರತೇಶ್ ಕುಮಾರ್ ಹಾಗೂ ಪ್ರಧಾನ ಕಾರ್ಯದರ್ಶಿ ನಾಗಭೂಷಣ, ಸಂಘಟನಾ ಕಾರ್ಯದರ್ಶಿಯಾಗಿ ಬಸವೇಶಿ ಖಜಾಂಚಿ ಕಲೀಲ್ ಸಾಬ್ ಉಪಾಧ್ಯಕ್ಷರಾಗಿ ಎನ್ ಕರಿಬಸಪ್ಪ ಹಾಗೂ ಮಹೇಂದ್ರ,

ಶ್ರೀಮತಿ ಜ್ಯೋತಿ ಹಾಗೂ ಸಂಘದ ಎಲ್ಲಾ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆಯಾದ ಎಲ್ಲಾ ಗ್ರೇಡ್ 2 ದೈಹಿಕ ಶಿಕ್ಷಣ ಶಿಕ್ಷಕರ ಸಂಘದ ವತಿಯಿಂದ ಅದ್ದೂರಿಯಾಗಿ ಸನ್ಮಾನ ಕಾರ್ಯಕ್ರಮ ಬುಧವಾರ ರಂದು ನೆರವೇರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಗ್ರೇಡ್ – 2. ಸಂಘದ ಅಧ್ಯಕ್ಷರಾದ ಚೆನ್ನಬಸಪ್ಪ ಅವರು ಹಾಗೂ ಜಿಲ್ಲಾ ವಿಜಯನಗರದ ದೈಹಿಕ ಶಿಕ್ಷಕರ ಸಂಘದ ಉಪಾಧ್ಯಕ್ಷರಾದ ಎ.ರಮೇಶ್ ರವರು. ತಾಲೂಕು ಘಟಕದ ಉಪಾಧ್ಯಕ್ಷರಾದ ಕೋಗಳಿ ಕೊಟ್ರೇಶ್, ಕರಿಬಸಪ್ಪ ,ವೀರಣ್ಣ ಕರಿ ಬಸವನ ಗೌಡ ಖಜಾಂಚಿ ಹಾಗೂ ಇನ್ನೂ ಹಲವಾರು ಪದಾಧಿಕಾರಿಗಳು ಮತ್ತು ದೈಹಿಕ ಶಿಕ್ಷಣ ಶಿಕ್ಷಕರು ಹಾಗೂ ಶಶಿಧರ್, ತಾಲೂಕು ಪರಿವೀಕ್ಷಕರು. ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿ ಗೊಳಿಸಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ.ಸಾಲುಮನೆ ಕೂಡ್ಲಿಗಿ**

## ತರೀಕೆರೆ ಪಟ್ಟಣದಲ್ಲಿ ಹೋಳಿ ಸಂಭ್ರಮ



**ಸಿಹಿ ಕಹಿ ಸುದ್ದಿ,**

**ತರೀಕೆರೆ :** ಹೋಳಿ ಹಬ್ಬದ ಪ್ರಯುಕ್ತ ಭಾವಸಾರ ಕ್ಷತ್ರಿಯ ಸಮಾಜ ಮತ್ತು ಮರಾಠ ಸಮಾಜದ ಬಾಂಧವರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಕಾಮನ ಪ್ರತಿಮೆಯನ್ನು ಮೆರವಣಿಗೆ ಮಾಡಿ, ಡಿಜೆ ಹಾಕಿ ಕುಣಿದು ಕುಪ್ಪಳಿಸಿ ಸಂಭ್ರಮಾಚರಣೆ ಮಾಡಿದರು. ಸಮಾಜದ ತಾಲೂಕ ಅಧ್ಯಕ್ಷರಾದ ಸುನಿಲ್ ಕುಮಾರ್ ನೇತೃತ್ವದಲ್ಲಿ ತರೀಕೆರೆ ಯಲ್ಲಿ ಹೋಳಿ ಹಬ್ಬದ ಸಂಭ್ರಮದಿಂದ ಆಚರಿಸಿ ಬಣ್ಣದ ಓಕುಳಿ ಆಡಿದರು.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎನ್. ವೆಂಕಟೇಶ್. ತರೀಕೆರೆ. ಚಿಕ್ಕಮಗಳೂರು**

## ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಅಗತ್ಯ: ಬಸವರಾಜ ಅವಟಿ



**ಕೊಲ್ಹಾರ :** ಪಟ್ಟಣದ ಕೆಜಿಎಸ್ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಶುಕ್ರವಾರ ಹಮ್ಮಿಕೊಳ್ಳಲಾಗಿತ್ತು. ಪಟ್ಟಣದ ಕೆಜಿಎಸ್ ಶಾಲೆಯಲ್ಲಿ ಮುಖ್ಯ ಅತಿಥಿಗಳಾಗಿ ಬಿಆರ್ಪಿ ಬಿ ಎಸ್ ಅವಟಿ ಮಾತನಾಡಿ ಮಕ್ಕಳಲ್ಲಿ ನಾವು ಇಂದು ಸಂಶೋಧನಾ, ಏಕೆ ಹೇಗೆ ಎಂಬ ಪ್ರಶ್ನೆ ಕೇಳುವಂತಾ ಹಾಗೂ ಸೃಜನಶೀಲ ಮಕ್ಕಳಾಗಿ ಬೆಳೆಯುವಂತಾ ಶಿಕ್ಷಣ ನಮ್ಮ ಸರ್ಕಾರಿ ಶಾಲೆಯಲ್ಲಿ ಸಿಗುತ್ತದೆ ಎಂದು ಹೇಳಿದರು ಮತ್ತು ಈ ಶಾಲೆಯ ಮಕ್ಕಳ ಹಲವಾರು ಪ್ರಯೋಗಗಳ ನೋಡಿದರೆ ಈ ಮಕ್ಕಳ ಕ್ರಿಯಾಶೀಲತೆ ಉತ್ತಮವಾಗಿದೆ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಸಿಆರ್ಪಿ ಜಿ ಆಯ್ ಗುಡ್ಯಾಳ ಮಾತನಾಡಿ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸುವ ಹಾಗೂ ಕ್ರಿಯಾಶೀಲತೆಯ ಗುಣಗಳು ದೊರೆಯುವಂತಾ ಶಿಕ್ಷಣ ನಾವು ನೀಡಬೇಕು ಎಂದು ತಿಳಿಸಿದರು.

ಈ ಸರ್ಕಾರಿ ಶಾಲೆ ಮಕ್ಕಳು ಯಾವುದೇ ಕಾರ್ಯಕ್ರಮವಿದ್ದರು ಅದರಲ್ಲಿ ಪ್ರಥಮ ಸ್ಥಾನ ಪಡೆದುಕೊಳ್ಳುತ್ತಾರೆ ಕಾರಣ ಈ ಮಕ್ಕಳಲ್ಲಿ ಪರಿಶ್ರಮ ಇದೆ ಎಂದು ತಿಳಿಸಿದರು.

ಸುಮಾರು 50 ಪ್ರಯೋಗಗಳನ್ನು ವಿಶೇಷವಾಗಿ ಈ ಮಕ್ಕಳು ತಾವೇ ತಯಾರಿಸಿದ ಪ್ರಯೋಗಗಳನ್ನು ತಾವೇ ನಿರರ್ಗಳವಾಗಿ ವಿವರಿಸುವ ಗುಣ ನೋಡಿದರೆ ತುಂಬಾ ಸಂತೋಷ ಅನಿಸುತ್ತದೆ ಎಂದು ಪಟ್ಟಣ ಪಂಚಾಯಿತಿ ಅಧ್ಯಕ್ಷ ಚನ್ನಮಲ್ಲಪ್ಪ ಗಿಡ್ಡಪ್ಪಗೋಳ ಹೇಳಿದರು.

ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಕಾರ್ಯಕ್ರಮದಲ್ಲಿ ಸುರೇಶ ಗಿಡ್ಡಪ್ಪಗೋಳ,ರೇಖಾ ಪುಂಡಲೀಕ ಬೆಳ್ಳುಬ್ಬಿ, ಜ್ಯೋತಿ ಕೊಟ್ಟಗಿ,ಆಯ್ ಸಿ ಪಾಟೀಲ್, ಕೆ ಆರ್ ದಾಸರ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## ಸಕ್ಕರೆ ಕಾರ್ಖಾನೆ ವ್ಯಾಪ್ತಿ ರಸ್ತೆ ಅಭಿವೃದ್ಧಿಗೆ 20 ಕೋಟಿ ರೂ.: ಸಚಿವ ಶಿವಾನಂದ ಪಾಟೀಲ

**ವಿಜಯಪುರ :** ಕಬ್ಬು ಬೆಳೆಗಾರರ ಹಿತರಕ್ಷಣೆ, ಸಕ್ಕರೆ ಉದ್ದಿಮೆಗಳ ಅಭಿವೃದ್ಧಿ, ನೇಕಾರರ ಪ್ರಗತಿಗೆ ಬಜೆಟ್ ನಲ್ಲಿ ಹಲವು ಉಪಕ್ರಮಗಳನ್ನು ಘೋಷಣೆ ಮಾಡಲಾಗಿದ್ದು, ನಿರೀಕ್ಷಿತ ಅಭಿವೃದ್ಧಿ ಸಾಧಿಸುವ ಆಶಾಭಾವನೆ ಇದೆ. ಸಕ್ಕರೆ ಕಾರ್ಖಾನೆಗಳ ವ್ಯಾಪ್ತಿಯ ರಸ್ತೆ ಅಭಿವೃದ್ಧಿಗೆ 20 ಕೋಟಿ ರೂ. ಒದಗಿಸಲಾಗಿದೆ. ಕಾರ್ಮಿಕರ ಕೊರತೆಯಿಂದ ಕಬ್ಬು ಕಟಾವು ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು 140ಕ್ಕೂ ಅಧಿಕಶುಗರ್‌ಕೇನ್ ಹಾರ್ವೆಸ್ಟ್ ಹಬ್‌ಗೆ 70 ಕೋಟಿ ರೂ. ಸಹಾಯಧನ ಒದಗಿಸಲಾಗಿದೆ. ಈ ಕ್ರಮ ಕಬ್ಬು ಕಟಾವು ಸಮಸ್ಯೆಗೆ ಪರಿಹಾರ ನೀಡಲಿದೆ ಎಂದು ಸಕ್ಕರೆ, ಕಬ್ಬು ಅಭಿವೃದ್ಧಿ, ಜವಳಿ ಹಾಗೂ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಸಕ್ಕರೆಕಾರ್ಖಾನೆಗಳಸಹಯೋಗದೊಂದಿಗೆ ಬೆಳಗಾವಿ, ವಿಜಯಪುರ, ಬಾಗಲಕೋಟೆ, ಕಲಬುರಗಿ ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಒಟ್ಟು ಸುಮಾರು ಮೂರು ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಸಮಗ್ರ ಮಣ್ಣು ಮತ್ತುನೀರಿನ ನಿರ್ವಹಣೆ, ಸಮರ್ಪಕ ತ್ಯಾಜ್ಯ ನಿರ್ವಹಣೆ, ನೀರಿನ ಬಳಕೆ ಮತ್ತು ಸಮತೋಲನ ಪೋಷಕಾಂಶಗಳ ನಿರ್ವಹಣೆ ಮಾಡುವ ನಿರ್ಧಾರ ಯೋಗ್ಯವಾದುದು. ಹಾಗೆಯೇ ಜೈವಿಕ ಕೃಷಿ ಪರಿಕರ ಸ್ಟಾರ್ಟ್ ಅಪ್‌ಗಳು ಉತ್ಪಾದನೆಮಾಡುವಜೈವಿಕಪರಿಕರಗಳನ್ನು ರೈತ ಸಂಪರ್ಕ ಕೇಂದ್ರಗಳ ಮೂಲಕ ರೈತರಿಗೆ ಸೂಕ್ತ ದರದಲ್ಲಿ ಮಾರಾಟ ಮಾಡಲು ಉತ್ತೇಜಿಸುವ ಸರ್ಕಾರದ ಕ್ರಮ ಜೈವಿಕ ಕೃಷಿಕರಿಗೆ ಬಲ ನೀಡಲಿದೆ ಎಂದು ಆಶಿಸಿದ್ದಾರೆ.

ಬಜೆಟ್ ಬಗ್ಗೆ ಪ್ರತಿಕ್ರಿಯೆ ನೀಡಿರುವ ಸಚಿವರು , ರಾಜ್ಯದ ಸಕ್ಕರೆ ಕಾರ್ಖಾನೆಗಳು 2023–24ನೇ ಸಾಲಿನಲ್ಲಿ 585 ಲಕ್ಷ ಮೆಟ್ರಿಕ್ ಟನ್ ಕಬ್ಬು ನುರಿಸಿ 53 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಿವೆ. ಈ ಅವಧಿಕಯಲ್ಲಿ ಎಲ್ಲ ಸಕ್ಕರೆ ಕಾರ್ಖಾನೆಗಳು ಕಬ್ಬು ಬೆಳೆಗಾರರಿಗೆ ಪೂರ್ಣ ಬಿಲ್ ಪಾವತಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆ. ಇದು ಸಕ್ಕರೆ ಕಾರ್ಖಾನೆ ಇತಿಹಾಸದಲ್ಲಿ ಸಾಧನೆ ಎಂದರೆ ತಪ್ಪಾಗದು ಎಂದು ಸಕ್ಕರೆ ಸಚಿವರು ತಿಳಿಸಿದ್ದಾರೆ.

ನೇಕಾರರ ಜೀವನಮಟ್ಟ ಸುಧಾರಣೆಗೆ ಮತ್ತು ನೇಕಾರಿಕೆ ಉದ್ದಿಮೆ ಉತ್ತೇಜನಕ್ಕೆ ಈಗ ಪ್ರಗತಿಯಲ್ಲಿರುವ ಹಲವು ಯೋಜನೆಗಳನ್ನು ಒಗ್ಗೂಡಿಸಿ ನೇಕಾರರ ಪ್ಯಾಕೇಜ್ ? 2.0 ಘೋಷಣೆ ಮಾಡಲಾಗಿದೆ. ಜವಳಿ ಮತ್ತು ಸಿದ್ಧ ಉಡುಪು ಕ್ಷೇತ್ರದಲ್ಲಿ ಹೆಚ್ಚಿನ ಬಂಡವಾಳ ಆಕರ್ಷಿಸಿ ಸುಮಾರು 2 ಲಕ್ಷ ಉದ್ಯೋಗ ಸೃಷ್ಟಿಗೆ ನೂತನ ಜವಳಿ ನೀತಿ ರೂಪಿಸುವ ಘೋಷಣೆ ಮಾಡಿರುವುದು ಜವಳಿ ಕ್ಷೇತ್ರಕ್ಕೆ ಪುನಶ್ಚೇತನ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಜಿಲ್ಲೆಯ ರಾಣೆಬೆನ್ನೂರು ಸೇರಿದಂತೆ ಹಲವು ಮಡೆ ಪಿಪಿಪಿ ಮಾದರಿಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ನಿರ್ಧಾರ ಉದ್ಯೋಗ ಸೃಜನೆಯೊಂದಿಗೆ ಆರ್ಥಿಕ ಪ್ರಗತಿ ಸಾಧನೆ ಮಾಡಲು ಸಹಾಯವಾಗಲಿದೆ. ಹಾವೇರಿ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ನಮ್ಮ ಹಲವು ಬೇಡಿಕೆಗಳಿಗೆ ಬಜೆಟ್‌ನಲ್ಲಿ ಸಿಎಂ ಸಿದ್ದರಾಮಯ್ಯ ಅವರು ಆದ್ಯತೆ ನೀಡಿರುವುದು ಸಂತಸ ತಂದಿದೆ ಎಂದು ಅವರು ಹೇಳಿದ್ದಾರೆ.

ಬ್ಯಾಡಗಿ ಮೆಣಸಿನಕಾಯಿ ತಳಿಯ ಸಂರಕ್ಷಣೆ ಮತ್ತು ಎಲೆಮುರುಟು ರೋಗ, ತ್ರಿಪ್ಸ್ ಇತ್ಯಾದಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಂಶೋಧನೆ ಕೈಗೊಳ್ಳುವ ನಿರ್ಧಾರ ಬ್ಯಾಡಗಿ ತಳಿಯ ಅಭಿವೃದ್ಧಿಗೆ ನೆರವಾಗಲಿದೆ. ದೇಶಿ ತಳಿಗಳ ಬೀಜ ಬ್ಯಾಂಕ್ ಸ್ಥಾಪನೆ ನಿರ್ಧಾರ ದ 20 ಜಿಐ ಟ್ಯಾಗ್ ಹೊಂದಿರುವ ಬೆಳೆಗಳು, ಹಾಗೂ ಇತರೆ ದೇಸಿ ತಳಿಗಳು ನಶಿಸಿ ಹೋಗುವುದನ್ನು ತಪ್ಪಿಸಲು ಸಹಾಯವಾಗಲಿದೆ.



ತೊಗರಿ ಬೆಳೆಯಲ್ಲಿ ನೂತನ ತಾಂತ್ರಿಕತೆ ಅಳವಡಿಕೆ, ಕ್ಷೇತ್ರ ವಿಸ್ತರಣೆ ಮತ್ತು ತೊಗರಿಯನ್ನು ಅಂತರ ಬೆಳೆಯನ್ನಾಗಿ ಪ್ರೋತ್ಸಾಹಿಸುವ ಮೂಲಕ ಉತ್ಪಾದನೆಯಲ್ಲಿ ರಾಷ್ಟ್ರದಲ್ಲೆ ಮುಂಚೂಣಿ ರಾಜ್ಯವನ್ನಾಗಿಸುವ ನಿರ್ಧಾರ ತೊಗರಿ ಬೆಳೆಗಾರರ ಹಿತರಕ್ಷಣೆಗೆ ನೀಡುವ ಆದ್ಯತೆಗೆ ಸಾಕ್ಷಿಯಾಗಿದೆ. ಕನಿಷ್ಠ ಬೆಂಬಲ ಬೆಲೆ ಯೋಜನೆಯಲ್ಲಿ ತೊಗರಿ ಖರೀದಿಗೆಕೇಂದ್ರಸರ್ಕಾರನಿಗದಿಪಡಿಸಿರುವ 7,550 ರೂ.ಗಳೊಂದಿಗೆ ರಾಜ್ಯ ಸರ್ಕಾರ 450 ರೂ. ಪ್ರೋತ್ಸಾಹ ಧನ ಘೋಷಣೆ ಮಾಡಿದ್ದು, ಈ ಉದ್ದೇಶಕ್ಕೆ 138 ಕೋಟಿ ರೂ.ಗಳನ್ನು ಒದಗಿಸಿರುವುದರಿಂದ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಂತಾಗಿದೆ ಎಂದು ಸಚಿವರು ಹೇಳಿದ್ದಾರೆ.

ರಾಜ್ಯದ ಎಲ್ಲ ಎಪಿಎಂಸಿಗಳಲ್ಲಿ ಪರವಾನಗಿ ಪಡೆದ ಶ್ರಮಿಕರು ಮೃಪಟ್ಟಾಗ ಅವರ ವಾರಸುದಾರರಿಗೆ ಇದುವರೆಗೆ ನೀಡುತ್ತಿದ್ದ ಒಂದು ಲಕ್ಷ ರೂ.

ಪರಿಹಾರವನ್ನು ಐದು ಲಕ್ಷ ರೂ.ಗಳಿಗೆ ಹೆಚ್ಚಳ ಮಾಡಿರುವುದರಿಂದ ಅಂತಹ ಕುಟುಂಬಗಳಿಗೆ ಸ್ವಲ್ಪಮಟ್ಟಿಗೆ ಆರ್ಥಿಕ ನೆರವು ಸಿಕ್ಕಂತಾಗಲಿದೆ. ಕುರಿ ಮತ್ತು ಮೇಕೆ ಸಾಕಾಣಿಕೆದಾರರಿಗೂ ಕೊಡುಗೆ ನೀಡಲಾಗಿದ್ದು, ಕೊಪ್ಪಳ ಜಿಲ್ಲೆಯ ಬೂದುಗುಂಪ ಗ್ರಾಮದಲ್ಲಿ 25 ಕೋಟಿ ರೂ. ವೆಚ್ಚದಲ್ಲಿ ಕುರಿ ಮತ್ತು ಮೇಕೆ ಮಾರುಕಟ್ಟೆ ನಿರ್ಮಾಣ ಮಾಡುತ್ತಿರುವುದು ಕುರಿಗಾರರಿಗೆ ಉತ್ತೇಜನ ನೀಡಿದಂತಾಗಿದೆ. ಬೆಂಗಳೂರಿನಲ್ಲೂ ಸುಸಜ್ಜಿತ ಕುರಿ ಮತ್ತು ಮೇಕೆ ಮಾರುಕಟ್ಟೆ ಪ್ರಾರಂಭ ಮಾಡಲು ನಿರ್ಧರಿಸಿರುವುದೂ ಕೂಡ ಒಳ್ಳೆಯ ಬೆಳವಣಿಗೆ ಎಂದು ಹೇಳಿದ್ದಾರೆ.

ಚಿಕ್ಕಬಳ್ಳಾಪುರದಲ್ಲಿ ಎಪಿಎಂಸಿಯಿಂದ ಅಂತಾರಾಷ್ಟ್ರೀಯ ಮಟ್ಟದ ಹೈಟೆಕ್ ಹೂವಿನ ಮಾರುಕಟ್ಟೆ ಮತ್ತು ಕೆಜಿಎಫ್‌ನಲ್ಲಿ ರೈತರ ಆಧುನಿಕ ಮಾರುಕಟ್ಟೆ ನಿರ್ಮಾಣ ಯೋಜನೆಗಳ ರೈತರ ಆರ್ಥಿಕ ಶಕ್ತಿ ಸುಧಾರಣೆಗೆ ನೆರವಾಗಲಿವೆ.20 ಕೋಟಿ ರೂ. ವೆಚ್ಚದಲ್ಲಿ ಸಿ ಧಾನ್ಯಗಳ ಹಬ್ ಸ್ಥಾಪನೆಯಿಂದ ಸಾವಯವ ಉತ್ಪನ್ನಗಳು ಮತ್ತು ಸಿರಿಧಾನ್ಯಗಳ ಬೇಡಿಕೆ ಮತ್ತು ಪೂರೈಕೆಗಳ ಅಂತರವನ್ನು ಸರಿದೂಗಿಸಲು ಹಾಗೂ ರೈತರಿಗೆ ಸೂಕ್ತ ಮಾರುಕಟ್ಟೆಯನ್ನು ಕಲ್ಪಿಸಲು ನೆರವಾಗಲಿದೆ.

ಬಸವನಬಾಗೇವಾಡಿ ಕ್ಷೇತ್ರದ ತಿಡಗುಂದಿಯಲ್ಲಿ ಪ್ಲಗ್ ಅಂಡ್ ಪ್ಲೇ ಸೌಲಭ್ಯ ಇರುವ ಫ್ಲಾಟ್ ಫ್ಯಾಕ್ಟರಿ ಸ್ಥಾಪನೆ ಮಾಡುವ ನಿರ್ಧಾರಘೋಷಣೆಮಾಡಿರುವುದುಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆಗಳನ್ನು ಉತ್ತೇಜಿಸಲು ನೆರವಾಗಲಿದೆ.

ಹೊಸದಾಗಿ ಘೋಷಣೆಯಾಗಿರುವ ಬಸವನಬಾಗೇವಾಡಿ ಕ್ಷೇತ್ರದ ಕೊಲ್ಹಾರದ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಉನ್ನತೀಕರಣ ಮಾಡುವ ನಿರ್ಧಾರ ಆರೋಗ್ಯ ಸೇವೆಯನ್ನು ಉತ್ತಮಪಡಿಸಲಿದೆ ಎಂದು ಹೇಳಿದ್ದಾರೆ.

## ಲೋಕಾ ದಾಳಿ: 2.34 ಕೋಟಿ ಅಕ್ರಮ ಆಸ್ತಿ ಪತ್ತೆ

**ವಿಜಯಪುರ :** ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿರುವ ಆರೋಪದ ಹಿನ್ನೆಲೆ ಇಲ್ಲಿನ ಕರ್ನಾಟಕ ಗೃಹ ಮಂಡಳಿ ಕಚೇರಿ ಪ್ರಥಮ ದರ್ಜೆ ಸಹಾಯಕ ಶಿವಾನಂದ ಕೆಂಬಾವಿ ಈತನ ಎರಡು ನಿವಾಸಗಳ ಮೇಲೆ ಲೋಕಾಯುಕ್ತ ಪೊಲೀಸರು ಗುರುವಾರ ಬೆಳ್ಳಂ ಬೆಳಗ್ಗೆ ಏಕಾಏಕಿ ದಾಳಿ ನಡೆಸಿ 2.34 ಕೋಟಿ ರೂ.ಗಳ ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ.

ನಗರದ ಸುಕೂನ್ ಕಾಲೋನಿಯಲ್ಲಿರುವ ಎಫ್‌ಡಿಎ ಶಿವಾನಂದ ಕೆಂಬಾವಿ ನಿವಾಸ ಹಾಗೂ ವಿಜಯಪುರ ತಾಲೂಕಿನ ತಿಡಗುಂದಿ ಗ್ರಾಮದಲ್ಲಿ ಇರುವ ಫಾರ್ಮ್ ಹೌಸ್ ಮೇಲೆ ಏಕಕಾಲಕ್ಕೆ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ, ಇಡೀ ದಿನ ದಾಖಲೆಗಳನ್ನು ಪರಿಶೀಲಿಸಿದ್ದಾರೆ.

ಈ ವೇಳೆ 2.34 ಕೋಟಿ ರೂ.ಗಳ ಅಕ್ರಮ ಆಸ್ತಿ, 15 ಲಕ್ಷ




ನಗದು, ಚಿನ್ನ, ಬೆಳ್ಳಿ, ವಾಹನ ಸೇರಿ ಇತರೆ ಆಸ್ತಿಗಳ ದಾಖಲಾತಿಗಳು ಪತ್ತೆಯಾಗಿವೆ.

ಈ ಕಾರ್ಯಾಚರಣೆಯನ್ನು ಲೋಕಾಯುಕ್ತ ಎಸ್ಪಿ ಟಿ. ಮಲ್ಲೇಶ ಅವರ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಸುರೇಶ ರೆಡ್ಡಿ, ಸಿಪಿಐಗಳಾದ ಆನಂದ ಟಕ್ಕನ್ನವರ್, ಆನಂದ ಡೋಣಿ ಹಾಗೂ ಸಿಬ್ಬಂದಿಗಳ ತಂಡ ದಾಳಿ ನಡೆಸಿದೆ.

## ಸಾಮಾಜಿಕ ಕಳಕಳಿ, ಉದ್ಯಮಸ್ನೇಹಿ ಬಜೆಟ್: ಸಚಿವ ಎಂ.ಬಿ. ಪಾಟೀಲ

**ವಿಜಯಪುರ :** ಮುಖ್ಯಮಂತ್ರಿ ಸಿದ್ದರಾಮಯ್ಯನವರು 16ನೇ ಬಾರಿಗೆ ಮಂಡಿಸಿರುವ ಬಜೆಟ್ ಸಾಮಾಜಿಕ ಕಳಕಳಿ ಹೊಂದಿರುವ ಕಲ್ಯಾಣ ಕಾರ್ಯಕ್ರಮಗಳು ಮತ್ತುಆರ್ಥಿಕಬೆಳವಣಿಗೆಗೆಇಂಬುನೀಡುವ ಕೈಗಾರಿಕಾ ಬೆಳವಣಿಗೆ ಎರಡಕ್ಕೂ ಸಮಾನ ಪ್ರಾತಿನಿಧ್ಯ ನೀಡಿರುವ ಸಮಗ್ರದೃಷ್ಟಿಕೋನದ ಬಜೆಟ್ ಆಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ ಬಿ ಪಾಟೀಲ ಹೇಳಿದ್ದಾರೆಸಿದ್ದರಾಮಯ್ಯನವರು1995ರಲ್ಲಿ ಮೊದಲ ಬಾರಿ ಬಜೆಟ್ ಮಂಡಿಸಿದಾಗ ಅದರ ಗಾತ್ರ 12 ಸಾವಿರ ಕೋಟಿ ರೂ. ಗಳಿತ್ತು. ಈ ವರ್ಷ ಇದು 4.09 ಲಕ್ಷ ಕೋಟಿ ರೂ.ಗಳಿಗೆ ಏರಿದೆ. ಇದು ಅವರ ಆರ್ಥಿಕ ಚಿಂತನೆಯನ್ನು ಪ್ರತಿಫಲಿಸುತ್ತದೆ. ಜತೆಗೆ ತೆರಿಗೆ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಕೇಂದ್ರ ಸರಕಾರವು ಮಾಡುತ್ತಿರುವ ಅನ್ಯಾಯದ ಬಗ್ಗೆಯೂಅವರುಹೇಳಿದ್ದಾರೆ.ಇದುಒಂದು ಹೊಸ ಚರ್ಚೆಗೆ ನಾಂದಿ ಹಾಡಲಿದೆ ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳಕ್ಕೆ ಮುಖ್ಯಮಂತ್ರಿಗಳು ಕೃಷಿ ಸಂಶೋಧನಾ ಕೇಂದ್ರ ಮತ್ತು ಮುಧೋಳಕ್ಕೆ ಹೆರಿಗೆ ಆಸ್ಪತ್ರೆ ಘೋಷಿಸಿದ್ದಾರೆ. ಇದು ಪ್ರಾದೇಶಿಕ ಸಮತೋಲನೆಯನ್ನುನಿವಾರಣೆ ಮಾಡುವ ಕ್ರಮವಾಗಿದೆ.

ಹಾಗೆಯೇ, ತಿಡಗುಂದಿಯಲ್ಲಿ ಪ್ಲೇ & ಪ್ಲಗ್ ಮಾದರಿಯ ಕೈಗಾರಿಕಾ ಪಾರ್ಕ್ ಸ್ಥಾಪನೆ ಘೋಷಿಸಿರುವುದು ಆ ಜಿಲ್ಲೆಯ ಉಸ್ತುವಾರಿ ಸಚಿವನಾಗಿರುವ ತಮಗೆ ಖುಷಿ ತಂದಿದೆ ಎಂದು ಅವರು ನುಡಿದಿದ್ದಾರೆ.

ಮುಖ್ಯಮಂತ್ರಿಗಳು ಬಂಡವಾಳ ಹೂಡಿಕೆಸ್ನೇಹಿ ವಾತಾವರಣ ಸೃಷ್ಟಿಯ ಬಗ್ಗೆ ಬಜೆಟ್ಟಿನಲ್ಲಿ ಪ್ರಸ್ತಾಪಿಸಿದ್ದಾರೆ. ಇ.ವಿ.ಕ್ಲಸ್ಟರ್ ಸ್ಥಾಪನೆಗೆ 25 ಕೋಟಿ ರೂ ಕೊಟ್ಟಿರುವುದು ಒಳ್ಳೆಯ ಕ್ರಮವಾಗಿದೆ. ಬೆಂಗಳೂರು ಉಪನಗರ ರೈಲು ಯೋಜನೆಗೆ 15,767 ಕೋಟಿ ರೂ. ಅನುದಾನ ನೀಡುತ್ತಿರುವುದು ಮತ್ತು ನಗರದಲ್ಲಿ ಸಂಪರ್ಕ ವ್ಯವಸ್ಥೆಯನ್ನು ಸುಗಮಗೊಳಿಸಿರುವ ಮೆಟ್ರೋ ರೈಲು ಯೋಜನೆಯನ್ನು ದೇವನಹಳ್ಳಿಯವರೆಗೂ ವಿಸ್ತರಿಸಿರುವುದು ಸಕಾಲಿಕ ಕ್ರಮಗಳಾಗಿವೆ ಎಂದು ಪಾಟೀಲ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ರಾಜ್ಯದ ಸಮಗ್ರ ಅಭಿವೃದ್ಧಿ ಎಂದರೆ,

# ಮಕ್ಕಳ ಬೆಳೆಸುವಿಕೆಯಲ್ಲಿ ನಿರ್ಲಕ್ಷ್ಯ ತೋರಬೇಡಿ: ಎಂ ಬಿ ಬಿರಾದಾರ



**ಕೊಲ್ಹಾರ :** ಪಟ್ಟಣದ ಎಸ್ ಕೆ ಎಂ ಟ್ರಸ್ಟ್ ಬೆಳ್ಳುಬ್ಬಿ ದಿಂದ ನವ ಚೈತನ್ಯ ವಾರ್ಷಿಕೋತ್ಸವ ಶನಿವಾರ ನವಚೈತನ್ಯ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ಪಿಎಸ್ಐ ಎಮ್ ಬಿ ಬಿರಾದಾರ ಮಾತನಾಡಿ ಮಗು ವಿಶ್ವಮಾನವಾಗಿ ಹುಟ್ಟಿ ತನ್ನ ಪರಿಸರದ ಪರಿಣಾಮವಾಗಿ ಅಲ್ಪ ಮಾನವರಾಗಿ ಬಿಡುತ್ತದೆ ಆ ಮಗು ಉತ್ತಮ ಸಂಸ್ಕಾರ ಮತ್ತು ಶಿಕ್ಷಣ ನೀಡಿ ಮತ್ತೆ ವಿಶ್ವಮಾನವನಾಗಿ ಮಾಡುತ್ತವೆ ಆದುದರಿಂದ ಈ ಶಾಲೆಗಳು ನಿಜವಾದ ಜೀವಂತ ದೇವಾಲಯಗಳು ಇದ್ದಂತೆ ಎಂದು ತಿಳಿಸಿದರು.

ತಾಯಿಯು ಮಗುವಿನ ಬೆಳವಣಿಗೆ ನಿರ್ಲಕ್ಷ್ಯ ತೋರಬಾರದು ಏಕೆಂದರೆ ಮಗು ಆರು ವರ್ಷ ತಾಯಿ ತಂದೆ ಕಾರ್ಯಗಳನ್ನು ನೋಡಿ ಕಲಿಯುತ್ತದೆ ಆದ್ದರಿಂದ ತಾಯಿ ಮೊದಲ ಗುರು ಇದ್ದಂತೆ ಮಗುವಿಗೆ ಉತ್ತಮ ಸಂಸ್ಕಾರ ನೀಡಿ ಬೆಳೆಸಿದರೆ ಸಮಾಜಕ್ಕೆ ಅದೇ ದೊಡ್ಡ ಕೊಡುಗೆ ಎಂದು ಹೇಳಿದರು.

ಉಪನ್ಯಾಸಕರಾಗಿ ನಿರ್ಮಲಾ ಶೀಲವಂತ ಮಾತನಾಡಿ ಮಕ್ಕಳಿಗೆ ಕುಟುಂಬ, ಸಮಾಜ, ಪರಿಸರ ಇವುಗಳ ಬಗ್ಗೆ ಸಂಪೂರ್ಣ ಜ್ಞಾನ ತಾಯಿ ಬಾಲ್ಯದಲ್ಲಿ ನೀಡಿದರೆ ಮಗು ಬಹಳ ಖುಷಿ ಸಂತೋಷ ಸಂಭ್ರಮ ದಿಂದ ಬೆಳೆದು ಉತ್ತಮ ಆರೋಗ್ಯವಂತ ಮಗುವನ್ನು ಸಮಾಜಕ್ಕೆ ಕೊಡುಗೆಯಾಗಿ ನೀಡಿದ ಹಾಗೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ಎಸ್ ಕೆ ಎಂ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಶಂಕರ ಕಲ್ಯಾಣಿ (ಬಣಜಿಗೇರ) ವಹಿಸಿದ್ದರು, ಅತಿಥಿಗಳಾಗಿ ಸಮಾಜ ಚಿಂತಕರಾದ ಭಾರತಿ ಶಂಕರ ಬಣಜಿಗೇರ,ಪ್ರಾಚಾರ್ಯರು ಸಿದ್ದಗಂಗಾ ಪ್ರೌಢಶಾಲೆ, ವಿಜಯಪುರ ಅಂಬಿಕಾ ಬಿರಾದಾರ,

ಮಂಜುನಾಥಮಟ್ಯಾಳ,ಬಸವರಾಜಅಪ್ಪನವರ,ಸಿದ್ದು ನಾಗರಾಳ ಪುಷ್ಪಾ ಪಾರಗೊಂಡ,ಸ್ಮಿತಾ ಬಾಗಿ, ಪಾರ್ವತಿ ತುಪ್ಪದ, ವಿದ್ಯಾಶ್ರೀ ಕೊಬ್ಬನವರ, ಕಲಾವತಿ ಶಿರೂರು, ಗೌರಮ್ಮ ಬಾಗಿ, ಅಶ್ವಿನಿ ಹಂಡಗಿ ಹಾಗೂ ಶಾಲಾ ಸಿಬ್ಬಂದಿ ವರ್ಗದವರು ಪಾಲ್ಗೊಂಡಿದ್ದರು.

# ಮನಸ್ಸು ನಿಶ್ಚಲವಾಗಿ ಪ್ರಶಾಂತವಾಗಿರಬೇಕು

**ತಾಳಿಕೋಟೆ :** ಮನಸ್ಸು ಆರೋಗ್ಯದಿಂದ ಇದ್ದರೆ ಮಾತ್ರ ಸಂತೋಷವೆಂಬುದು ದೊರೆಯಲು ಸಾಧ್ಯವಾಗುತ್ತದೆ ಮನಸ್ಸು ರೋಗಗ್ರಸ್ಥವಾಗಿದ್ದರೆ ಅಂತಹ ಮನುಜನಿಗೆ ಏನೇ ದೊರೆತರು, ಏನೇ ಲಭಿಸಿದರು ಯಾವುದರಿಂದಲೂ ಆತನಿಗೆ ಸಂತೋಷ ದೊರೆಯುವದಿಲ್ಲಾವೆಂದು ಖ್ಯಾತ ಪುರಾಣ ಪ್ರವಚನಕಾರರಾದ ಶರಣಸೋಮನಾಳದ ಶ್ರೀಮಹಾದೇವಯ್ಯಶಾಸ್ತ್ರಿಗಳು ನುಡಿದರು.

ಗುರುವಾರರಂದು ಶ್ರೀ ಶರಣಮುತ್ಯಾರವರ ಜಾತ್ರೋತ್ಸವ ನಿಮಿತ್ಯವಾಗಿ ಶ್ರೀಮಠದ ಪ್ರಾಂಗಣದಲ್ಲಿ ಏರ್ಪಡಿಸಲಾದ ಶ್ರೀ ಪವಾಡ ಬಸವೇಶ್ವರರವರ ಮಹಾ ಪುರಾಣದ 6ನೇ ದಿನದಂದು ಮಾತನಾಡುತ್ತಿದ್ದ ಅವರು ಸಂತೋಷವೆಂಬುದನ್ನು ಪಡೆದುಕೊಳ್ಳಬೇಕಾದರೆ ಮೊದಲು ಮನಸ್ಸೆಂಬುದು ಆರೋಗ್ಯಕರವಾಗಿರಬೇಕು ಮನಸ್ಸು ತೀವ್ರವಾಗಿ ಚಂಚಲಕ್ಕೆ ಕಳವಳಕ್ಕೆ, ಬೇಸರಕ್ಕೆ ದುಃಖಕ್ಕೆ ಚಿಂತೆಗೆ ಮುಂತಾದ ಬಯಕೆಗಳಿಗೆ ಒಳಗಾಗಿ ಹಲವಾರು ವಿದವಾಗಿ ಮನಸ್ಸು ವಿಕೃತಗೊಂಡಿದ್ದರೆ ಅಂತಹ ಮನಸ್ಸು ರೋಗಗ್ರಸ್ಥ ಮನಸ್ಸು ಎಂದು ಅರ್ಥೈಸಲಾಗುತ್ತದೆ ಎಂದರು. ಅಂತಹ ರೋಗಗ್ರಸ್ಥ ಮನುಷ್ಯನಿಗೆ ಅಂತಹ ಶ್ರೇಷ್ಠವಸ್ತು ಇದ್ದರೂ ಅಂತಹ ಶ್ರೇಷ್ಠ ವಿಚಾರದಿಂದಲೂ ಸಂತೋಷವೆಂಬುದು ದೊರೆಯುವದಿಲ್ಲಾವೆಂದರು. ಮನಸ್ಸು ನಿಶ್ಚಲವಾಗಿ, ಪ್ರಶಾಂತವಾಗಿ, ಹಾಯಾಗಿ, ನೆಮ್ಮದಿಯಾಗಿ, ತೃಪ್ತಿಯಾಗಿ ಉತ್ಸಾಹವಾಗಿ ಧೈರ್ಯವಾಗಿ ಪ್ರಶಾಂತವಾಗಿ ಹೀಗೆ ಮನಸ್ಸು ಸಕ್ರಮವಾಗಿ ಇದ್ದರೆ ಅಂತಹ ಮನಸ್ಸು ಆರೋಗ್ಯಕರ ಮನಸ್ಸೆಂದು ಹೇಳಲಾಗುತ್ತದೆ ಎಂದರು.

ಆರೋಗ್ಯಕರ ಮನಸ್ಸು ಹೊಂದಿರುವ ಮನುಜನಿಗೆ ಸಾಮಾನ್ಯವಾದ ವಸ್ತು ವಿಚಾರಗಳಿಂದಲೂ ಹೆಚ್ಚು ಸಂತೋಷ ಪ್ರಾಪ್ತವಾಗುತ್ತದೆ ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ ಆರೋಗ್ಯ ಪೂರ್ಣ ಮನುಷ್ಯನ ಮನಸ್ಸಿಗೆ ಯಾವ ಕಾರಣವಿಲ್ಲದೇ ಸಂತೋಷ ದೊರೆಯಲು ಪ್ರಾರಂಭವಾಗುತ್ತದೆಅದುವೇಕಾರಣವಿಲ್ಲದೇ ದೊರೆಯುವ ಸಂತೋಷವೆಂದರು. ಅಂತಹ ಸಂತೋಷದಿಂದ ಬಾಳಿ ಬೆಳಗುತ್ತಾ ಸಾಗಿದ ಪವಾಡ ಬಸವೇಶ್ವರರು ಏಕಾಂತ ಸ್ಥಳದಲ್ಲಿ ಇರುತ್ತಿದ್ದ ಅವರು ತಾಯಿ ಕರೆದು ಊಟ ಮಾಡಿಸುತ್ತಾಳೆ ಒಮ್ಮೆ ಚಿಣಿಪಣಿ ಆಟವಾಡುತ್ತಿದ್ದಾಗ ಚಿಣಿಯೊಂದು ಜಿಗಿದು ಆಟವಾಡುತ್ತಿರುವ ಬಾಲಕನ ಕಣ್ಣಿನಲ್ಲಿ ಸಿಗಿ ಬಿಳ್ಳುತ್ತದೆ ಇದನ್ನೆಲ್ಲ ಅರೀತ ಎಲ್ಲ ಗೆಳೆಯರ ಬಳಗ ಓಣಿಯಲ್ಲಿ ವಿಷಯ ಎಲ್ಲರಿಗೂ ಗೊತ್ತಾಗಿ ಜನ ತಂಡ ತಂಡದಿಂದ ಬಂದು ಘಟನೆಯ ವಿವರಣೆ ಪಡೆದಾಗ ಬಸವೇಶ್ವರನೇ ಹೊಡೆದ ಚಿಣಿ ಪಣಿ ಆಟದಿಂದ ಬಂದ ಚಿಣಿ ಬಾಲಕನ ಕಣ್ಣಲ್ಲಿ ಸಿಗಿ ಬಿದ್ದಿದೆ ಎಂದು ಹೇಳಿದಾಗ ನೋಡುತ್ತಿದ್ದ ಜನ ಜಂಗುಳಿ ಸಮ್ಮುಖದಲ್ಲಿಯೇ ಪವಾಡ ಬಸವಣ್ಣ ಎಲ್ಲಿ ಬಡೆದಿದೆ ಯಾವ ಕಣ್ಣು ಎಂದು ಕೇಳುತ್ತಲೇ ಆ ಚಿಣಿ ಬಡೆದ ಬಾಲಕನ ಕಣ್ಣನ್ನು ತನ್ನಲ್ಲಿಯ ಪವಾಡದಿಂದ ಕಣ್ಣಿಗೆ ಒರಿಸಿ ನೋಡುವಷ್ಟರಲ್ಲಿಯೇ ಮೊದಲು ಇದ್ದಂತೆಯೇ ಕಣ್ಣು ಅದಾಗಿತ್ತು ಇಂತಹ ಪವಾಡವನ್ನು ನೋಡಿದ ಜನತೆ ಕೇವಲ 8 ವರ್ಷದವನಿರುವಾಗಲೇ ಪವಾಡ ಬಸವೇಶ್ವರರು ಮಾಡಿದ ಪವಾಡಗಳು ಎಲ್ಲ ಭಕ್ತರಿಗೆ ಮೊದಲೇ ಅನುಭವವಾಗುತ್ತಾ ಸಾಗಿದ್ದವು.

ಪವಾಡ ಬಸವೇಶ್ವರರಂತೆ ಭೂದಿ ಸ್ವಾಮಿಗಳು ಸಹ 770 ವರ್ಷಗಳು ಬಧುಕಿ ಬಾಳಿದವರಾಗಿದ್ದರು ಒಂದೂ ಸಹ ಪವಾಡ ಮಾಡಿದಿಲ್ಲಾ ಒಮ್ಮೆ ಅವರು ಕುಳಿತ ಸ್ಥಳದಲ್ಲಿ ಮಗ್ಗಲಿದ್ದ ಬಾವಿಯಲ್ಲಿಯ ನೀರು ತುಂಬಲು ಬಾಲಕಿ ಬಂದಾಗ ಭೂದಿ ಸ್ವಾಮಿ ಅವರು ಮಗ್ಗಲು ಕುಳಿತ ನಾಗಲಿಂಗ ಎನ್ನುವ ಆತನೇ ಆ ಬಾಲಕಿಯನ್ನು ಭಾವಿಯಲ್ಲಿ



ತಳ್ಳಿ ಬಿಡುತ್ತಾನೆ ನೀರಿನಲ್ಲಿ ಬಿದ್ದ ಬಾಲಕಿ ಸಾವನಪ್ಪಿದ್ದರೂ ಇದನ್ನು ಅರೀತ ಜನ ಜಂಗುಳಿಆಸ್ಥಾನಕ್ಕೆಬಂದುಆಬಾಲಕಿಯನ್ನು ಹೊರ ತೆಗೆದು ನೋಡುವಷ್ಟರಲ್ಲಿಯೇ ಈ ಬಾಲಕಿಯನ್ನು ಭಾವಿಯಲ್ಲಿ ಕೆಡವಿದವರು ಭೂದಿ ಸ್ವಾಮಿಗಳೆಂದು ಅಪವಾದ ಉಂಟಾಗುತ್ತದೆ ಆ ಸತ್ತು ಬಿದ್ದ ಬಾಲಕಿಗೆ ಶವ ಮುಟ್ಟಿ ಭಾವಿಯಲ್ಲಿ ನಿನ್ನನ್ನು ನಾನೇ ಕೆಡವಿದ್ದೇನೆ ಏನು ಎಂದು ಸತ್ತ ಬಾಲಕಿಗೆ ಪ್ರಶ್ನೀಸಿದಾಗ ನೀವಿಲ್ಲಾ ಕೆಡವಿದವರು ನಾಗಲಿಂಗ ಎನ್ನುವರೆಂದು ಸತ್ತ ಬಾಲಕಿ ಎದ್ದು ನಾಗಲಿಂಗನ ಕಡೆಗೆ ಕೈ ಮಾಡಿ ತೋರಿಸಿದಳಂತೆ ಇಂತಹ ಪವಾಡಗಳನ್ನು ಗೈದಂತಹ ಭೂದಿ ಸ್ವಾಮಿಗಳು ಸಹ 770 ವರ್ಷಗಳು ಬಾಳಿ ಬೆಳಗಿದ್ದರೂ ಅನೇಕ ತಮ್ಮ ಲೀಲೆಗಳನ್ನು ಮಾಡಿ ತೋರಿಸಿದ್ದಾರೆಂದು ಹೇಳಿದ ಪುರಾಣಿಕರು ಮಹಾತ್ಮರ ದರ್ಶನದಿಂದ ನಮಗೆ ಅರಿವು ಬರುತ್ತದೆ ಅವರ ದರ್ಶನದಿಂದ ಪಾವನರಾಗುತ್ತೇವೆಂದು ಸಂತ ತುಕಾರಾಮ ಮಹಾರಾಜರಲ್ಲಿ ಕಳ್ಳರು ಬಂದು ಅವರ ಕಳ್ಳತನಕ್ಕೆ ಕೊಂಡೊಯ್ದು ಕಳ್ಳರು ಸಹ ಸಂತ ತುಕಾರಾಮ ಮಹಾರಾಜರಂತೆ ಸಂತರ ದಾರಿಯಲ್ಲಿ ನಡೆದಿದ್ದರ ಕುರಿತು ಚಿಕ್ಕ ಕಥೆಯೊಂದನ್ನುಹೇಳಿದಪುರಾಣಿಕರುಸಂತ ತುಕಾರಾಮ ಮಹಾರಾಜರು ಜೀವಂತವಾಗಿ ಸ್ವರ್ಗಕ್ಕೆ ಹೋಗಿ ಬಂದವರಾಗಿದ್ದಾರೆಂದು ಹೇಳಿದ ಶಾಸ್ತ್ರಿಗಳು ಶರೀರದ ಮೇಲೆ ಲಿಂಗವಿರಬೇಕು ದೇಹದಲ್ಲಿ ಮಂತ್ರವೆಂಬುದು ಇರಬೇಕು ಅಂದರೆ ಶರೀರವೆಂಬುದು ತಂಪಾಗಿರುತ್ತದೆ ಎಂದು ಬಂಡೆಪ್ಪ ಶರಣರು ಸಂತಾನ ಇಲ್ಲದ ಭಕ್ತ ಕುಟುಂಬ ಒಂದಕ್ಕೆ ಅವರ ಬೇಡಿಕೆಯಂತೆ ಸಂತಾನವನ್ನು ಪ್ರಾಪ್ತಿ ಮಾಡಿಕೊಟ್ಟಂತ ಕಾರ್ಯವನ್ನೂ ಸಹ ಶರಣರು ಮಾಡಿ ಹೆಸರು ಪಡೆದಿದ್ದಾರೆ ಅಂತಹ ಕಾರ್ಯದಿಂದಲೇ ಶರಣರ ಮಠವೆಂಬುದು ಈಗ ಉತ್ತುಂಗಕ್ಕೇರಲು ಕಾರಣವಾಗಿದೆ ಎಂದರು. ಅಂಕಲಗಿ ಅಡವಿಸಿದ್ದರ ಮಠಕ್ಕೆ ಹೋಗಿ ಪುರಾಣ ಹೇಳಿದ ಶರಣರು ಕಲಿಯದೇ ಶಾಲೆಗೆ ಹೋಗದೇ ಪುರಾಣ ಪುಣ್ಯ ಕಥೆಗಳನ್ನು ಹೇಳಿ ಬಂದಿರುವದು ಪವಾಡವೇ ಅಲ್ಲವೇ ಎಂದು ಪುರಾಣಿಕರು ಭಕ್ತ ಸಮೂಹಕ್ಕೆ ಪ್ರಶ್ನೀಸಿದರು.

ಈ ಸಮಯದಲ್ಲಿ ಶ್ರೀ ಶರಣರ ಮಠದ ಬಸಣ್ಣ ಶರಣಮುತ್ಯಾರವರು, ಶರಣಪ್ಪಮುತ್ಯಾರವರು, ಆನಂದ ಶರಣರು, ಸಂಗಮೇಶ ಶರಣರು, ಕಾಶಿರಾಯ ದೇಸಾಯಿ, ಗುರುಮೂರ್ತಿ ಹಿರೇಮಠ, ಮಹಾದೇವಿ ಹಾವಿನಾಳ,ಮಲ್ಲಣ್ಣ ಶರಣರು, ಭೀಮಣ್ಣ ಇಂಗಳಗಿ, ಗುರು ಶರಣರು, ಸಿದ್ದಣ್ಣ ಶರಣರ, ಶಾಂತಗೌಡ ಬಿರಾದಾರ, ಶ್ರೀಕಾಂತ ಬಿರಾದಾರ, ಸಾಹಿಲ್ ಮುರಾಳ, ಮೊದಲಾದವರು ಉಪಸ್ಥಿತರಿದ್ದರು.

ಸಂಗೀತ ಸೇವೆಯನ್ನು ರಾಜು ಗುಬ್ಬೇವಾಡ, ಬಸನಗೌಡ ಬಿರಾದಾರ ಅವರು ನಡೆಸಿಕೊಟ್ಟರು. ಶರಣಗೌಡ ಪೊಲೀಸ್‌ಪಾಟೀಲ ಸ್ವಾಗತಿಸಿದರು. ಈರಣ್ಣ ಶರಣರ ನಿರೂಪಿಸಿ ವಂದಿಸಿದರು.

# ಸುವರ್ಣಾ ಸಾರಂಗಮಠಗೆ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ

**ಆಲಮೇಲ :** ಪಟ್ಟಣದ ಶ್ರೀ ವಿಶ್ವೇಶ್ವರ ಬಾಲಭಾರತಿ ಅನುದಾನಿತ ಪ್ರಾಥಮಿಕ ಶಾಲೆಯ ಶಿಕ್ಷಕಿ ಸುವರ್ಣ ಸಾರಂಗಮಠ ರವರಿಗೆ ಚೇತನ ಫೌಂಡೇಶನ್ ಧಾರವಾಡ ,ಕಾವ್ಯಶ್ರೀ ಚಾರಿಟಬಲ್ ಟ್ರಸ್ಟ ( ರಿ.) ಹಾಗೂ ಕರ್ನಾಟಕ ಸೋಷಿಯಲ್ ಕ್ಲಬ್ ಬೆಂಗಳೂರು ವತಿಯಿಂದ ಹಮ್ಮಿಕೊಂಡಿರುವ ಅಂತರಾಷ್ಟ್ರೀಯ ಮಹಿಳಾ ಸಾಹಿತ್ಯ ಸಮ್ಮೇಳನದಲ್ಲಿ ಅಂತರರಾಷ್ಟ್ರೀಯ ಸಾವಿತ್ರಿಬಾಯಿ ಫುಲೆ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿಗೆ ಭಾಜನರಾಗಿದ್ದಾರೆ.

ಪ್ರಶಸ್ತಿ ಲಭಿಸಿದ್ದಕ್ಕೆ ಸಂಸ್ಥೆಯ ಅಧ್ಯಕ್ಷರು ಎಸ್.ಆಯ್. ಜೋಗೂರ,ಕಾರ್ಯದರ್ಶಿಗಳು ಪ್ರಶಾಂತ ಬಡದಾಳ, ಕೋಶಾಧ್ಯಕ್ಷರು ಅರವಿಂದ ಕುಲಕರ್ಣಿ, ಆಡಳಿತ ಮಂಡಳಿಯ ಸದಸ್ಯರು, ಶಾಲಾ ಶಿಕ್ಷಕ ವೃಂದ ಹಾಗೂ ಶಿಕ್ಷಕ ಪಂಡಿತ ಅವಜಿ ಹರ್ಷ ವ್ಯಕ್ತ ಪಡಿಸಿದ್ದಾರೆ.

# ಗೋದಾಮಿಗೆ ಆಕಸ್ಮಿಕ ಬೆಂಕಿ ಹಾನಿ

**ಬಸವನ ಬಾಗೇವಾಡಿ :** ಪಟ್ಟಣದ ಎಪಿಎಂಸಿಯಲ್ಲಿ ಗೋದಾಮಿಗೆ ಆಕಸ್ಮಿಕ ಬೆಂಕಿ ತಗಲಿದ ಪರಿಣಾಮ ದವಸ ಧಾನ್ಯ ಸುಟ್ಟು ಕರಕಲಾಗಿ ಹಾನಿ ಸಂಭವಿಸಿದೆ ಗುರುವಾರ ಬೆಳಿಗ್ಗೆ ವಾಯು ವ್ಯವಹಾರಕ್ಕೆ ತೆರಳಿದ ಜನರು ಗೋದಾಮಿಗೆ ಬೆಂಕಿ ತಗಳಿದ್ದನ್ನು ಗಮನಿಸಿ ಅಗ್ನಿಶಾಮಕ ಠಾಣೆಗೆ ಮಾಹಿತಿ ನೀಡಿದ್ದಾರೆ, ವಿಷಯ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ ಇಂಗಳೇಶ್ವರ ಗ್ರಾಮದ ಪ್ರಭು ಮಹದೇವಪ್ಪ ಡಿಗ್ಗಾವಿ ಎಂಬುವರಿಗೆ ಸೇರಿದ್ ಗೋಧಾಮು ಇದಾಗಿದ್ದು ಗೋದಾಮಿನಲ್ಲಿ 250 ಚೀಲ ತೊಗರಿ 150 ಚೀಲ ಮೆಕ್ಕೆಜೋಳ 50 ಚೀಲ ಕಡಲೆ 50 ಚೀಲ ಸಜ್ಜೆ ಚೀಲ ಸೇರಿದಂತೆ ದವಸ ಧಾನ್ಯ ತುಂಬಲು ಬಳಸುವ ಕಾಲಿ ಚೀಲ ತಡಪಾಲು ಸುಟ್ಟುದರಿಂದ ಅಂದಾಜು 10 ಲಕ್ಷ ಮೌಲ್ಯದ ವಸ್ತುಗಳಿಗೆ ಹಾನಿಯಾಗಿದೆ ಎಂದು ಪ್ರತ್ಯಕ್ಷ ದರ್ಶಿಗಳು ತಿಳಿಸಿದ್ದಾರೆ ಭಟ್ಟನಾ ಸ್ಥಳಕ್ಕೆ ತಹಶೀಲ್ದಾರ್ ವೈ ಎಸ್ ಸೋಮನಕಟ್ಟಿ ಭೇಟಿ ನೀಡಿ ಪರಿಶೀಲಿಸಿದ್ದಾರೆ.



# “ತುಂಗಭದ್ರ ಮಡಿಲಿನ ಹಚ್ಚಹಸಿರಿನ ವನ ಈ ಪಂಪಾವನ”













"ತುಂಗಭದ್ರಮಡಿಲಿನಹಚ್ಚಹಸಿರಿನವನಈಪಂಪಾವನ".... ಉದ್ಯಾನಗಳೆಂದರೆ ಅಲ್ಲಿ ಶಾಂತಿಯು ಉಸಿರಾಡಬೇಕು. ಮನಸ್ಸು ಮತ್ತು ಬುದ್ಧಿ ನೆಮ್ಮದಿಯಿಂದ ವಿರಮಿಸುತ್ತಾ, ಉಲ್ಲಾಸಭರಿತವಾಗಿರಬೇಕು ಎಂಬುದು ಜಪಾನಿಯರ ಮೂಲಉದ್ದೇಶ.ಇವರುವಿನ್ಯಾಸಮಾಡುವಉದ್ಯಾನಗಳ ಕಲೆ ಮನುಷ್ಯನಲ್ಲಡಗಿರುವ ಶಕ್ತಿ–ಚೈತನ್ಯಗಳು ಸದಾಕಾಲ ಅರಳುವುದಕ್ಕೆ ಎಡೆ ಮಾಡಿಕೊಡುತ್ತವೆ. ಕಾವೇರಿಯಿಂದ ಗೋದಾವರಿಯವರೆಗೆ ವಿಸ್ತರಿಸಿದ್ದ ನಮ್ಮ ಕನ್ನಡ ನಾಡು ವೈವಿಧ್ಯಮಯ ನಿಸರ್ಗ ತಾಣಗಳಿಂದ ಕಂಗೊಳಿಸುತ್ತಿದ್ದ ಸಮೃದ್ಧ ನಾಡಾಗಿತ್ತೆಂದು ಇತಿಹಾಸ ಹೇಳುತ್ತದೆ. ಇಲ್ಲಿನ ಪ್ರಕೃತಿ– ಪರಿಸರ, ಚೆಲುವಿನ ಗಿರಿಧಾಮಗಳಿಂದ ಪ್ರಭಾವಿತನಾಗಿ ಆದಿಕವಿ ಪಂಪನು..'ಮರಿ ದುಂಬಿಯಾಗಿ ಮೇಣ್ ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್ ಎಂದು ಬಣ್ಣಿಸಿದ್ದಾನೆ. ಇಂತಹ ನೋಡುಗರ ಕಣ್ ಮನಸೆಳೆಯುವ "ಪಂಪವನವೂ" ಒಂದು. ಕೊಪ್ಪಳ ಜಿಲ್ಲೆಯ ಮುನಿರಾಬಾದ್ ನ ತುಂಗಭದ್ರ ಯೋಜನಾ ಡ್ಯಾಮ್ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಪಂಪಾವನ, ತುಂಗಭದ್ರೆಯ ಮಡಿಲಿನಲ್ಲಿ ಅತ್ಯಂತ ಆಕರ್ಷಿತವಾಗಿ ಸಿಂಗರಿಸಿಕೊಂಡು ಕಂಗೊಳಿಸುತ್ತಿದೆ.

ವಿಜಯನಗರ ಜಿಲ್ಲೆಯ ಹೊಸಪೇಟೆಯಿಂದ 8 ಕಿ.ಮೀ, ವಿಶ್ವವಿಖ್ಯಾತ ಹಂಪಿಯಿಂದ 21ಕಿ.ಮಿ, ಜಿಲ್ಲೆಯ ಕೇಂದ್ರ ಸ್ಥಳದಿಂದ 20 ಕಿಲೋ ಮೀಟರ್ ದೂರದಲ್ಲಿದೆ. ಕರ್ನಾಟಕ ರಾಜ್ಯದ ಆರು ವಿಸ್ತಾರವಾದ ಸಾರ್ವಜನಿಕ ಉದ್ಯಾನವನಗಳಲ್ಲಿ ಪಂಪಾವನವೂ ಸಹ ಒಂದಾಗಿದೆ. ಹೈದರಾಬಾದ್ ಕರ್ನಾಟಕ ಪ್ರಾಂತ್ಯದ ಏಕೈಕ ಬೃಹತ್ ಉದ್ಯಾನವನವಾಗಿದೆ. ನೈಸರ್ಗಿಕವಾಗಿ ಕಲ್ಲು ಗುಡ್ಡೆಗಳಿಂದ, ತಗ್ಗು ದಿನ್ನೆಗಳಿಂದ ಹರಡಿಕೊಂಡಿರುವ 66 ಎಕರೆ ಪ್ರದೇಶವನ್ನು 1971 ರಲ್ಲಿ ಉದ್ಯಾನವನ್ನಾಗಿ ನಿರ್ಮಿಸಲಾಗಿದ್ದು, ಜಪಾನ್ ಮಾದರಿಯಲ್ಲಿ ಅಭಿವೃದ್ಧಿಪಡಿಸಲಾಗಿದೆ. ವಿವಿಧ ವಿನ್ಯಾಸದ ಸೇತುವೆಗಳು, ಲಾಂದ್ರಗಳು, ನೀರಿನ ಕೊಳಗಳು ಎರಡು ಭವ್ಯವಾದ ಪ್ರವೇಶ ದ್ವಾರಗಳನ್ನು ಹೊಂದಿದೆ. ವಿವಿಧ ಜಾತಿಯ ಅಲಂಕಾರಿಕ ಗಿಡಗಳು, ಪೊದೆಗಳು, ಬಳ್ಳಿಗಳು, ಮರಗಳನ್ನು ಬೆಳೆಸಲಾಗಿದ್ದು, ತುಂತರು ನೀರಾವರಿ, ಹನಿ ನೀರಾವರಿ ಮೂಲಕ ನೀರನ್ನು ಉಣಿಸಲಾಗುತ್ತಿದೆ. ವಿವಿಧ ಅಲಂಕಾರಿಕ ಸಸ್ಯಗಳನ್ನು ಅಭಿವೃದ್ಧಿಗೊಳಿಸಿ ಇಲಾಖೆ ದರದಲ್ಲಿ ಮಾರಾಟ ಮಾಡಲಾಗುತ್ತಿದೆ. ಇಡೀ ಉದ್ಯಾನವನವನ್ನು ಅನೇಕ ಭಾಗಗಳನ್ನಾಗಿ ಮಾಡಲಾಗಿದ್ದು, ಲಿಲ್ಲಿ ಕೊಳ ,ವೃತ್ತಾಕಾರ ಕೊಳ, ಸಂಗ್ರಹಣ ಕೊಳ, ಮೀನಿನ ಆಕಾರದ ಕೊಳ, ಪಾಮ್ ಗ್ರೂಪ್ ಪ್ರದೇಶ, ಸರೋವರ ಪ್ರದೇಶ ಮತ್ತು ಮಕ್ಕಳ ಉದ್ಯಾನವನಗಳೆಂದು ಹೆಸರಿಡಲಾಗಿದೆ.

ಅಪರೂಪವಾಗಿ ಅನೇಕ ವೃಕ್ಷ ಪ್ರಭೇದಗಳು ಸಮೃದ್ಧವಾಗಿ ಬೆಳದು ನಿಂತಿವೆ. ಉದ್ಯಾನವನದಲ್ಲಿ ಸುಂದರವೂ ಹಾಗೂ ಹಚ್ಚಹಸುರಿನ ಗಮನ ಸೆಳೆಯುವ ಹುಲ್ಲು ಹಾಸುಗಳನ್ನು ನಿರ್ಮಿಸಲಾಗಿದೆ. ಅಲಂಕಾರದ ಹೂವಿನ ಮರಗಳಾದ ನೀಲಿ ತುರಾಯಿ ಮರ, ನಾಗಲಿಂಗ ಪುಷ್ಪ ,ಮುತ್ತುಗ, ಬೂರುಗ, ಮರಸೌತೆ, ಸುರಹೊನ್ನೆ, ಬಿಳಿ ಬೀಟೆ ಮರ, ಶ್ರೀಗಂಧ, ರಕ್ತ ಚಂದನ, ಭಿಕ್ಷೆ ಪಾತ್ರೆ ಮರ, ಕೆಂಡಸಂಪಿಗೆ, ಬಗನಿಮರ,ಕಂಬದ ಮರ,ಕಕ್ಕೆನೀರು ಕಾಯಿ ಮರ,ಸೀತಾ ಅಶೋಕ ಮರ ಇತ್ಯಾದಿಗಳು ದಟ್ಟವಾಗಿ ಹೆಮ್ಮರಗಳಾಗಿ ಬೆಳೆದಿವೆ. 'ಮೋರೆಸೆ' ಕುಟುಂಬಕ್ಕೆ ಸೇರಿದ ಆಲ, ಗೋಣಿ, ಬಸರಿ, ಅರಳಿ ಮತ್ತು ಅತ್ತಿಮರಗಳು ವಿಶಾಲವಾಗಿ ಹರಡಿ, ಗಗನಚುಂಬಿ ಮರಗಳಾಗಿ ಬೆಳೆದಿವೆ. ಅನೇಕ



ಅಲಂಕಾರಿಕ ಪೊದೆಗಳು ,ಸುಗಂಧ ಹೂ ಬಿಡುವ ಮರಗಳು, ಬಣ್ಣ ಬದಲಾಯಿಸುವ ಮರಗಳು, ಹೂವಿನ ಮರಗಳು ಇತ್ಯಾದಿಗಳು ದಟ್ಟವಾಗಿ ಬೆಳೆದು ಬೇರೂರಿವೆ. ಕುಬ್ಜ(ಬೋನ್ ಸಾಯಿ) ಗಿಡಗಳ ನರ್ಸರಿ ಇದ್ದು ವಿಶೇಷವಾಗಿ ಬೆಳೆಸಲಾಗುತ್ತಿದೆ. ಫೆಬ್ರವರಿ – ಮಾರ್ಚ್ ತಿಂಗಳಲ್ಲಿ ಜಕರಂಡಾ, ಫಿಲ್ಟೋ ಫಾರ್ಮ್, ಮಳೆ ಮರ, ಹೊಳೆದಾಸವಾಳ,ಕಕ್ಕೆಮರಗಳ ಪುಷ್ಪೋತ್ಸವವು ಸಿಂಗಾರ ಮಾಡಿಕೊಂಡು ಉದ್ಯಾನವನಕ್ಕೆ ಸೌಂದರ್ಯವನ್ನು ಹೆಚ್ಚಿಸುತ್ತದೆ . ನಿಸರ್ಗ ಆರಾಧಕರಲ್ಲಿ ಮೈ ಮನಗಳನ್ನು ತಣಿಸಿ ಪುಳಕಿತವನ್ನುಂಟು ಮಾಡುತ್ತದೆ.

ಜಪಾನ್ ಮಾದರಿಯ " ಪಗೋಡಗಳು" ಈ ಪಾರ್ಕಿನಲ್ಲಿ ನಿರ್ಮಿಸಿರುವುದು ಮೆರಗನ್ನು ತಂದಿದೆ. ಕ್ರಿಸ್ತಶಕ 6ನೇ ಶತಮಾನದಲ್ಲಿ ಜಪಾನ್ ರಾಜವಂಶಸ್ಥರು ಅಪಾರ ನಿಸರ್ಗ ಪ್ರೇಮದಿಂದ, ಉದ್ಯಾನಗಳ ನಿರ್ಮಾಣಕ್ಕೆ ಹಾಗೂ ಸೌಂದರ್ಯಕ್ಕೆ ವಿಶೇಷ ಒತ್ತು ಕೊಟ್ಟರು. ಇದರ ಪರಿಣಾಮವಾಗಿ ಇಂದು 'ಜಪಾನಿ ಉದ್ಯಾನ ಕಲೆ' ಜಾಗತಿಕವಾಗಿ ಗಮನ ಸೆಳೆದಿದೆ. ವಿಶಾಲ ಹಸಿರಿನಿಂದ ಆಕಾಶವನ್ನು ಮುಟ್ಟಲು ಮೇಲೇರುವ ಪಗೋಡಗಳು, ಹೊರಗಡೆ ಸುಡು ಬಿಸಿಲಿದ್ದರೂ ಒಳಗಡೆ ತಂಪಾದ ಅನುಭವವನ್ನು ನೀಡುತ್ತವೆ. ವಿವಿಧ ಅಂತಸ್ತುಗಳಿಂದ ನಿರ್ಮಾಣವಾಗಿದ್ದು ತಮ್ಮ ಸೌಂದರ್ಯವನ್ನು ಉಳಿಸಿಕೊಳ್ಳುತ್ತಾ ಜಪಾನಿನ ರಾಯಭಾರಿಗಳಂತೆ ಕಂಗೊಳಿಸುತ್ತಿವೆ. ಚಿತ್ತಾಕರ್ಷಕ 'ಜಪಾನಿ ಲಾಂದ್ರ'ಗಳ ವಿನ್ಯಾಸಗಳನ್ನು ಈ ಉದ್ಯಾನವನದಲ್ಲಿ ಜೋಡಿಸಿರುವುದು ಮತ್ತೊಂದು ವಿಶೇಷ. ನಾಲ್ಕು ಬಗೆಯ ಉದ್ಯಾನ ಲಾಂದ್ರಗಳಿದ್ದು, ಸ್ತಂಭಲಾಂದ್ರ, ಮುಸುಕುಲಾಂದ್ರ, ಕ್ರಿಸ್ತರ ಮಾದರಿಲಾಂದ್ರ, ಶಿಲಾಲಾಂದ್ರಗಳು ಚಂದವಾಗಿ ಅಲಂಕಾರಗೊಂಡು ಪ್ರೇಕ್ಷಕರನ್ನು ಆಕರ್ಷಿಸುತ್ತಿವೆ.

ಮಕ್ಕಳ ಉದ್ಯಾನವನ, ಡೈನೋಸಾರ್ ಉದ್ಯಾನವೆಂದು ಪಾರ್ಕ್ ನಲ್ಲಿ ಅಭಿವೃದ್ಧಿಪಡಿಸಲಾಗಿದೆ. 1989ರಲ್ಲಿ ಈ ಪಾರ್ಕ್ ನಲ್ಲಿ ಮೊದಲ ಬಾರಿಗೆ ನಡೆದ ಫಲಪುಷ್ಪ ಪ್ರದರ್ಶನಕ್ಕೆ, ಉದ್ಘಾಟನಾ ಮುಖ್ಯ ಅತಿಥಿಯಾಗಿ ತೋಟಗಾರಿಕಾ ಪಿತಾಮಹ, ಭಾರತದ ಮೂಲೆ ಮೂಲೆಗೂ ರೈತರ, ಜನಸಾಮಾನ್ಯರ ಕಸುಬಾಗಿ ತೋಟಗಾರಿಕೆಯನ್ನು ಮಾಡಿದ, ದಕ್ಷ , ಪ್ರಾಮಾಣಿಕ ಅಧಿಕಾರಿಡಾ.ಎಮ್.ಹೆಚ್.ಮರಿಗೌಡರುಆಗಮಿಸಿದ್ದರು. ಮುನಿರಾಬಾದಿನ ಕೂಗಳತೆಯ ದೂರದಲ್ಲಿರುವ ಹುಲಿಗಿ ಎಂಬಾ ಗ್ರಾಮವಿದೆ ಇದೊಂದು ಪ್ರಖ್ಯಾತ ಕ್ಷೇತ್ರವಾಗಿದ್ದು ತುಂಗಭದ್ರದಡದಲ್ಲಿ 14–15 ಶತಮಾನದಿಂದಲು ವಿರಾಜಿಸಲ್ಪಡುತ್ತಿದೆ, ಇದು ಶ್ರೀ ಹುಲಿಗಮ್ಮದೇವಿಯವರ ದೇವಸ್ತಾನವಿದ್ದು, ಶಕ್ತಿಪೀಠವಾಗಿದೆ. ಸುಮಾರು 800 ವರ್ಷಗಳ ಭವ್ಯ ಇತಿಹಾಸವನ್ನು ಹೊಂದಿದ್ದು ಉತ್ತರ ಕರ್ನಾಟಕದ ಭಕ್ತರನ್ನು ಸದಾ ಆಕರ್ಷಿಸುತ್ತಿದೆ. ಪ್ರತಿ ಮಂಗಳವಾರ, ಶುಕ್ರವಾರ ಹುಣಿಮ್ಮೆಯ ದಿನಗಳಂದು ವಿಶೇಷವಾಗಿ ಭಕ್ತರ ಸ್ತೋಮವಿರುತ್ತದೆ. ಈ ಪವಿತ್ರ ಕ್ಷೇತ್ರಕ್ಕೆ ಬರುವ ಭಕ್ತಾದಿಗಳು ಮುನಿರಾಬಾದಿನ ಈ ಪಂಪಾವನಕ್ಕೆ ಭೇಟಿ ನೀಡುತ್ತಾರೆ. ಆನೆಗುಂದಿ–ಮುನಿರಾಬಾದ್ ರಸ್ತೆಯಲ್ಲಿರುವ ಆನೆಗುಂದಿ ಇಂದ ಸುಮಾರು 3 ಕಿ.ಮೀ ದೂರದಲ್ಲಿ ಅಂಜನಾದ್ರಿ ಪರ್ವತವಿದೆ. ಈ ದೇವಾಲಯಕ್ಕೆ ಭೇಟಿನೀಡುವ ಉತ್ತರ ಭಾರತೀಯರು ಹಾಗೂ ವಿದೇಶಿಯರು ಈ ಉದ್ಯಾನವನಕ್ಕೆ ಭೇಟಿ ನೀಡುತ್ತಾರೆ. ಇಡೀ ಉದ್ಯಾನವನದ ಪರಿಸರವನ್ನು ನೋಡುತ್ತಾ ಆನಂದವನ್ನು ಸವಿಯುತ್ತಾರೆ.

ಉದ್ಯಾನವನದ ಎದುರಿಗೆ ಜಿಲ್ಲಾ ಶಿಕ್ಷಣಾ ಮತ್ತು ತರಬೇತಿ ಸಂಸ್ಥೆ ಇದ್ದು ಇಲ್ಲಿ ನಡೆಯುವ ತರಬೇತಿಗಳನ್ನು ಪಡೆಯಲು ಆಗಮಿಸುವ ಶಿಕ್ಷಕರು ಈ ಉದ್ಯಾನವನದ ಜೀವ ವೈವಿಧ್ಯತೆಯನ್ನು ನೋಡಿ ಆನಂದಿಸುತ್ತಾರೆ. ವಿದ್ಯಾರ್ಥಿಗಳು, ಶಿಕ್ಷಕರು, ಉಪನ್ಯಾಸಕರು ಕ್ಷೇತ್ರ ಅಧ್ಯಯನ ಮಾಡಲು ಇಲ್ಲಿಗೆ ಆಗಮಿಸುತ್ತಾರೆ.

ಇದೊಂದು "ಜೀವಂತ ಪ್ರಯೋಗಶಾಲೆ" ಹಾಗೂ ಅನೇಕರ ಕಣ್ಮನ ಸೆಳೆಯುವ ಆಕರ್ಷಕ ಮತ್ತು ಅಪರೂಪದ ಉದ್ಯಾನವಾಗಿದೆ. ನೂತನ ವಧು–ವರರು ಆಗಮಿಸಿ ಪ್ರಿ–ವೆಡ್ಡಿಂಗ್ ಫೋಟೋ ಶೂಟಿಂಗ್ನಲ್ಲಿ ಭಾಗವಹಿಸುತ್ತಾರೆ. ಕನ್ನಡ ಮತ್ತು ತೆಲುಗು ಚಲನ ಚಿತ್ರಗಳ ಚಿತ್ರೀಕರಣ ಈ ಪಾರ್ಕ್ನಲ್ಲಿ ನಡೆದಿರುವುದು ಮತ್ತೊಂದು ವಿಶೇಷ. ಪಂಪಾವನ ತನ್ನ ಚೆಲುವು ಚಿತ್ತಾರಗಳಿಂದ ನಿಸರ್ಗ ದೇವಿಯ ಕಣ್ಮನ ಸೆಳೆಯುವ ರಮ್ಯನೆಲೆಯಾಗಿ ಸದಾ ಕಂಗೊಳಿಸುತ್ತದೆ.

**– ಹೆಚ್.ಆರ್.ಪನಮೇಶಲು**
**ಹಿರಿಯ ಉಪನ್ಯಾಸಕರು,**
**ಡಯಟ್ ಮುನಿರಾಬಾದ್, ಕೊಪ್ಪಳ ಜಿಲ್ಲೆ.**











## ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆ

# ಬೆಳಗಾವಿ–ಧಾರವಾಡ ರೈಲ್ವೆ ಮಾರ್ಗ ಯೋಜನೆ: ಸಮೀಕ್ಷೆ ಕಾರ್ಯ ತ್ವರಿತವಾಗಿ ಪೂರ್ಣಗೊಳಿಸಬೇಕು: ಸಂಸದ ಜಗದೀಶ್ ಶೆಟ್ಟರ್

**ಬೆಳಗಾವಿ :** ಬೆಳಗಾವಿ–ಧಾರವಾಡ ಮಾರ್ಗದರೈಲ್ವೆಯೋಜನೆಗೆಮಂಜೂರಾತಿ ದೊರೆತು ಬಹಳ ದಿನಗಳ ಕಳೆದಿವೆ. ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ, ಸಮೀಕ್ಷೆ ಪೂರ್ಣಗೊಳ್ಳದ ಕಾರಣ ಕಾಮಗಾರಿ ವಿಳಂಬವಾಗುತ್ತಿದೆ. ಮಾರ್ಚ್ ಅಂತ್ಯದೊಳಗೆ ಭೂ ಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಸಮೀಕ್ಷೆ ಕಾರ್ಯ ಪ್ರಾರಂಭಿಸಬೇಕು ಎಂದು ಲೋಕಸಭಾ ಸಂಸದ ಜಗದೀಶ್ ಶೆಟ್ಟರ್ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲೆಯ ವಿವಿಧ ಕಾಮಗಾರಿಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಹಲಗಾ–ಮಚ್ಚೆ ಮಾರ್ಗವಾಗಿ ರಸ್ತೆ ನಿರ್ಮಾಣಕ್ಕೆ ಈಗಾಗಲೇ ರೈತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಭೂ ಸ್ವಾಧೀನ ಪಡಿಕೊಳ್ಳಲಾಗಿದೆ. ಖಾನಾಪುರ–ರಾಮನಗರ ರೈಲ್ವೆ ಮಾರ್ಗದಲ್ಲಿ ಸಣ್ಣ ಪುಟ್ಟ ಸೇತುವೆಗಳಿದ್ದು, ಮೇಲ್ಸೇತುವೆಗಳ ನಿರ್ಮಾಣಕ್ಕೆ ಕ್ರಮ ವಹಿಸಬೇಕು ಎಂದು ತಿಳಿಸಿದರು.

ಬಾಕಿ ಉಳಿದಿರುವ ಭೂಸ್ವಾಧೀನವನ್ನು ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ಬಳಿಕ ಏಪ್ರಿಲ್ ಮೊದಲ ವಾರದಲ್ಲಿ ಕಾಮಗಾರಿ ಆರಂಭಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು.



24/7 ಶುದ್ಧ ಕುಡಿಯುವ ನೀರು ಸರಬರಾಜು ಯೋಜನೆ ವಿಳಂಬವಾಗದಂತೆ ನಿಗದಿತ ಕಾಲಮಿತಿಯೊಳಗೆ ಕಾಮಗಾರಿಗಳನ್ನು ಪೂರ್ಣಗಳೊಳ್ಳಬೇಕು ಎಂದು ಸಂಸದ ಜಗದೀಶ್ ಶೆಟ್ಟರ್ ಸೂಚಿಸಿದರು.

ಖಾನಾಪುರ ತಾಲ್ಲೂಕಿನ ಕುಸುಮಳ್ಳಿ ಸೇತುವೆ ನಿರ್ಮಾಣಕ್ಕೆ ಟೆಂಡರ್ ಕರೆದು, ಕಾಮಗಾರಿ ಪ್ರಾರಂಭಿಸಲಾಗಿದೆ ಸದ್ಯದಲ್ಲೇ ಪೂರ್ಣಗೊಳಿಸಲಾಗುವುದು ಎಂದು ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಹೇಳಿದರು.

ಬೆಳಗಾವಿ ಧಾರವಾಡ ರೈಲ್ವೆ ಮಾರ್ಗ ನಿರ್ಮಾಣಕ್ಕೆಬೆಳಗಾವಿ ವ್ಯಾಪ್ತಿಯಲ್ಲಿ ಬರುವ ಜಾಮೀನುಗಳನ್ನುಸಮೀಕ್ಷೆನಡೆಸಿ ಮಾರ್ಚ್ ಅಂತ್ಯದೊಳಗೆ ಪೂರ್ಣಗೊಳಿಸಬೇಕು. ತಕರಾರು ಇರುವ ಊರುಗಳಿಗೆ ನೋಟಿಸ್ ಜಾರಿ ಮಾಡಿ ಸ್ಥಳೀಯ ಅಧಿಕಾರಿಗಳು ಕ್ರಮ ವಹಿಸಬೇಕು ಎಂದು ಹೇಳಿದರು.

ಕೆಲವುರೈತರುನೋಟಿಸ್‌ಜಾರಿಮಾಡಿದರೂ ನೋಟಿಸ್ ಸ್ವೀಕರಿಸುತ್ತಿಲ್ಲ. ಹಾಗಾಗಿ ಸಮೀಕ್ಷೆ ಸಂದರ್ಭಲ್ಲಿ ಅಡತಡೆಗಳು ಉಂಟಾಗುತ್ತಿವೆ ಎಂದು ರೈಲ್ವೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಬಾಕಿ ಗ್ರಾಮಗಳ ವ್ಯಾಪ್ತಿಯಲ್ಲಿರುವ ಭೂ ಸಮೀಕ್ಷೆ ಪೂರ್ಣಗೊಳಿಸಬೇಕು. ಸಮೀಕ್ಷೆ ಬಳಿಕ ಟೆಂಡರ್ ಕರೆದು ಕಾಮಗಾರಿಗೆ ಚಾಲನೆ ನೀಡಲಾಗುವುದು. ನೋಟಿಸ್ ಸ್ವೀಕರಿಸದ ರೈತರೊಂದಿಗೆ ಚರ್ಚಿಸಿ ಸರ್ಕಾರದ ಮಾರ್ಗಸೂಚಿ ಅನ್ವಯ ಕಡ್ಡಾಯವಾಗಿ ಸಮೀಕ್ಷೆ ಮಾಡಬೇಕಾಗಿದೆ ಎಂದು ತಿಳಿಸಬೇಕು. ಇದಕ್ಕೆ ಬೆಳಗಾವಿ ಉಪ ವಿಭಾಗಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ರೈತರಿಗೆ ತಿಳಿಹೇಳಬೇಕು ಎಂದು ಸೂಚನೆ ನೀಡಿದರು. ತಿಳಕವಾಡಿ ರೈಲ್ವೆ ಗೇಟ್ ಮೇಲ್ಸೇತುವೆ ನಿರ್ಮಾಣಕ್ಕೆ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲಾಗಿದ್ದು, ಏಪ್ರಿಲ್ ಮೊದಲ ವಾರದಲ್ಲಿ ಕಾಮಗಾರಿಗಳನ್ನು ಪ್ರಾರಂಭಿಸಬೇಕು. ಕಾಮಗಾರಿ ಹಂತದಲ್ಲಿ ತಾನಾಜಿ ರೈಲ್ವೆ ಗೇಟ್ ಈಗಾಗಲೇ ಬಂದ್ ಇರಿಸಲು ಸೂಚನೆ ನೀಡಲಾಗಿದೆ ಎಂದು ಜಿಲ್ಲಾಧಿಕಾರಿ ರೋಷನ್ ಹೇಳಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬೆಳಗಾವಿ ವಿಶೇಷ ಭೂ ಸ್ವಾಧೀನಾಧಿಕಾರಿ ಬಲರಾಮ ಚವ್ಹಾಣ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಬಾಗಲಕೋಟೆ ಭೂ ವಿಶೇಷ ಸ್ವಾಧೀನಾಧಿಕಾರಿ ರಾಜಶ್ರೀ ಜೈನಾಪುರ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ಲೋಕೋಪಯೋಗಿ ಇಲಾಖೆ, ರೈಲ್ವೆ ಇಲಾಖೆ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

## ವಿವಿಧ ಜಯಂತಿಗಳ ಪೂರ್ವಭಾವಿ ಸಭೆ

# ಅರ್ಥಪೂರ್ಣ ಆಚರಣೆಗೆ ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಸೂಚನೆ



**ಬೆಳಗಾವಿ :** ಶ್ರೀ ರೇಣುಕಚಾರ್ಯ ಜಯಂತಿ ಮಾರ್ಚ್ 16 ರಂದು ಬೆಳಿಗ್ಗೆ 10.30 ಗಂಟೆಗೆ ಹಾಗೂ ಶ್ರೀ ಯೋಗಿ ನಾರೇಯಣ ಯತಿಂದ್ರ ಜಯಂತಿ ಕಾರ್ಯಕ್ರಮ ಸಂಜೆ 5 ಗಂಟೆಗೆ ಕುಮಾರ ಗಂಧರ್ವ ಕಲಾ ಮಂದಿರದಲ್ಲಿ ಅರ್ಥಪೂರ್ಣವಾಗಿ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ಅವರು ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ನಡೆದ ವಿವಿಧ ಜಯಂತಿಗಳ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಶ್ರೀ ರೇಣುಕಾಚಾರ್ಯ ಜಯಂತಿ ಮೆರವಣಿಗೆ ಕಾರ್ಯಕ್ರಮ ಬೆಳಿಗ್ಗೆ 9 ಗಂಟೆಗೆ ನಗರದ ಚನ್ನಮ್ಮ ವೃತ್ತದ ವೃತ್ತದಿಂದ ಕುಮಾರ ಗಂಧರ್ವ ಕಲಾ ಮಂದಿರದವರೆಗೆ ನಡೆಯಲಿದೆ ಎಂದರು.

ಮೆರವಣಿಗೆಯಲ್ಲಿ ಭಾಗವಹಿಸಲು ಕರಡಿ ಮಜಲು, ವೀರಗಾಸೆ ಸೇರಿದಂತೆ ವಿವಿಧ ಕಲಾತಂಡಗಳನ್ನು ಆಹ್ವಾನಿಸಲಾಗುವುದು.

ಎಲ್ಲ ತಾಲೂಕು ಮಟ್ಟದಲ್ಲಿ ಶ್ರೀ ರೇಣುಕಾಚಾರ್ಯ ಜಯಂತಿ ಆಚರಣೆಗೆ ಹಾಗೂ ಅಧಿಕಾರಿಗಳು ಕಡ್ಡಾಯವಾಗಿ ಜಯಂತಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸೂಚಿಸಲಾಗುವುದು ಎಂದು ತಿಳಿಸಿದರು.

ಅದೇ ರೀತಿಯಲ್ಲಿ ಸಂಜೆ 5 ಗಂಟೆಗೆ ನಡೆಯಲಿರುವ ಶ್ರೀ ಯೋಗಿ ನಾರೇಯಣ ಯತಿಂದ್ರ ಜಯಂತಿಯ ವೇದಿಕೆಕಾರ್ಯಕ್ರಮದಲ್ಲಿಸಮಾಜದ10ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸನ್ಮಾನ ಏರ್ಪಡಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ವಿಜಯಕುಮಾರ ಹೊನಕೇರಿ ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉಪ ನಿರ್ದೇಶಕಿ ವಿದ್ಯಾವತಿ ಭಜಂತ್ರಿ ಅವರು ಶ್ರೀ ರೇಣುಕಚಾರ್ಯ ಜಯಂತಿ ಹಾಗೂ ಶ್ರೀ ಯೋಗಿ ನಾರೇಯಣ ಯತಿಂದ್ರ ಜಯಂತಿ ಆಚರಣೆಗೆ ಅಗತ್ಯವಿರುವ ರೂಪರೇಷೆಗಳ ಕುರಿತು ವಿವರಿಸಿದರು.

ವಿವಿಧ ಸಮಾಜದ ಮುಖಂಡರಾದ ವಿ.ಜಿ ನಿರಲಗಿಮಠ, ಸಿ.ವಿ ಸಂಗೊಳ್ಳಿ, ಪ್ರತಿಭಾ ಕಳ್ಳಿಮಠ, ವಿಜಯ ಕೊಡಗಾನೂರು, ಡಿ. ರಾಮನಾಯ್ಡು, ಲಕ್ಷ್ಮೀ ತೆಲಂಗ, ಗೋವಿಂದಸ್ವಾಮಿ ನಾಯ್ಡು ಸೇರಿದಂತೆ ಮತ್ತಿತ್ತರು ಉಪಸ್ಥಿತರಿದ್ದರು.

# ಮಾ.16 ಕ್ಕೆ ಶ್ರೀ ಚನ್ನಬಸವೇಶ್ವರ 21 ಅಡಿ ಎತ್ತರದ ಮೂರ್ತಿ ನಿರ್ಮಾಣ ಕಾಮಗಾರಿಗೆ ಚಾಲನೆ

**ಬೈಲಹೊಂಗಲ :** ಪಟ್ಟಣದ ದೊಡ್ಡ ಕೆರೆಯಲ್ಲಿ ನಿರ್ಮಾಣವಾಗಲಿರುವ ಈ ಭಾಗದ ಆರಾಧ್ಯದೈವ ಶ್ರೀ ಚನ್ನಬಸವೇಶ್ವರ 21 ಅಡಿ ಎತ್ತರದ ಮೂರ್ತಿ ನಿರ್ಮಾಣ ಕಾಮಗಾರಿಗೆ ಮಾ. 16 ರಂದು ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಲಾಗುವುದು ಎಂದು ಬೈಲಹೊಂಗಲ ಮೂರುಸಾವಿರ ಮಠದ ಪ್ರಭು ನೀಲಕಂಠ ಸ್ವಾಮೀಜಿ ಹೇಳಿದರು.

ಪಟ್ಟಣದ ದೊಡ್ಡಕೆರೆ ಆವರಣದಲ್ಲಿನ ಶ್ರೀ ಚನ್ನಬಸವೇಶ್ವರ ಉದ್ಯಾನವನದಲ್ಲಿ ಹಮ್ಮಿಕೊಳ್ಳಲಾಗಿದ್ದ ಪೂರ್ವಭಾವಿ ಸಭೆಯ ಸಾನಿಧ್ಯ ವಹಿಸಿ ಅವರು ಮಾತನಾಡಿ ಹಲವು ಮಹಾತ್ಮರು ನಡೆದಾಡಿದ ಪುಣ್ಯ ಭೂಮಿ ಬೈಲಹೊಂಗಲ ಪಟ್ಟಣದಲ್ಲಿ



ಚನ್ನಬಸವೇಶ್ವರರ ಮೂರ್ತಿಯನ್ನು ಪ್ರತಿಷ್ಠಾಪನೆ ಮಾಡಬೇಕೆಂಬ ಹೆಬ್ಬಯಕೆಯನ್ನು ಹೊಂದಿದ್ದ ಈ ಭಾಗದ ಭಕ್ತರ ಕನಸು ನನಸಾಗುವ ಸುಸಂದರ್ಭ ಒದಗಿ ಬಂದಿದೆ.

ಇದೇ ಮಾರ್ಚ್ 16 ರಂದು 21 ಅಡಿ ಚನ್ನಬಸವೇಶ್ವರರ ಮೂರ್ತಿ ಕಾಮಗಾರಿ ಚಾಲನೆ ನೀಡಲಾಗುತ್ತಿದ್ದು,ಸದ್ಭಕ್ತರು ಭಾಗಿಯಾಗಿ ತನು, ಮನ, ಧನದಿಂದ ಸೇವೆ ಸಲ್ಲಿಸಬೇಕೆಂದರು.

ಚಿತ್ರನಟ ಶಿವರಂಜನ ಬೋಳನ್ನವರ ಮಾತನಾಡಿ ಈಗಾಗಲೇ ಪುರಸಭೆ ವತಿಯಿಂದ ದೊಡ್ಡ ಕೆರೆಯನ್ನು ಸಾಕಷ್ಟು ಅಭಿವೃದ್ಧಿಗೊಳಿಸಲಾಗಿದೆ.

ದೊಡ್ಡ ಕೆರೆ ಆವರಣದಲ್ಲಿ ಚನ್ನಬಸವೇಶ್ವರರ ಮೂರ್ತಿ ನಿರ್ಮಿಸಬೇಕೆಂಬ ಈ ಭಾಗದ ಬಹು ಜನರ ಬೇಡಿಕೆಯಂತೆ 21 ಅಡಿ ಎತ್ತರದ ಚನ್ನ ಬಸವೇಶ್ವರರ ಮೂರ್ತಿಯನ್ನು ಪ್ರತಿಷ್ಟಾಪಿಸಲು ನಿರ್ಧಾರಿಸಲಾಗಿದೆ.

ಶಾಸಕ ಮಹಾಂತೇಶ ಕೌಜಲಗಿ ಅವರು ಪುರಸಭೆ ವತಿಯಿಂದ ಮೂರ್ತಿ ಪ್ರತಿಷ್ಟಾಪಿಸಲು ಭವ್ಯವಾದ ಪಿಲ್ಲರ್ ನಿರ್ಮಿಸಿದ್ದಾರೆ.

ಮೂರ್ತಿಯ ಕಾಮಗಾರಿಗೆ ಮಾ. 16 ರಂದು ಮುಂಜಾನೆ 9 ಗಂಟೆಗೆ ಪೂಜೆ ಸಲ್ಲಿಸುವ ಮೂಲಕ ಚಾಲನೆ ನೀಡಲಾಗುತ್ತದೆ ಎಂದರು.

# ಯುವಕ, ಯುವತಿಯರಿಗೆ ಬೇಸಿಗೆ ತರಬೇತಿ ಶಿಬಿರ

**ಕೊಪ್ಪಳ :** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆವತಿಯಿಂದ ಎಪ್ರೀಲ್, ಮೇ ಮತ್ತು ಜೂನ್–2025ರ ಮಾಹೆಯಲ್ಲಿ ವಿವಿಧ ಕ್ರೀಡೆಗಳನ್ನು ಜಿಲ್ಲಾ ಕ್ರೀಡಾಂಗಣದಲ್ಲಿ ಬೇಸಿಗೆ ತರಬೇತಿ ಶಿಬಿರ ಏರ್ಪಡಿಸಲಾಗಿದೆ.

ಮಕ್ಕಳನ್ನು ಮಾನಸಿಕ ಹಾಗೂ ದೈಹಿಕ ಸಾಮರ್ಥ್ಯ ಹೊಂದಲು ಹಾಗೂ ಕ್ರೀಡಾ ಪಟುಗಳ ಆರೋಗ್ಯದ ಹಿತದೃಷ್ಠಿಯಿಂದ ಮತ್ತುಕ್ರೀಡಾಪಟುಗಳುರಾಜ್ಯಮತ್ತು ರಾಷ್ಟ್ರ ಮಟ್ಟದಲ್ಲಿ ಸಾಧನೆಗೈಯಲು ಅನುಕೂಲವಾಗುವ ದೃಷ್ಠಿಯಿಂದ ಈ ಬೇಸಿಗೆ ತರಬೇತಿ ಶಿಬಿರವನ್ನು ಹಮ್ಮಿಕೊಳ್ಳಲಾಗಿದ್ದು, ಈ ತರಬೇತಿ ಶಿಬಿರದಲ್ಲಿ ಕನಿಷ್ಠ 10 ಜನರು ಇಲಾಖೆಯಲ್ಲಿತಮ್ಮಹೆಸರುಗಳನ್ನು ನೋಂದಾಯಿಸಿದಲ್ಲಿ ಅಂತಹ ಕ್ರೀಡೆಗಳನ್ನು ಬೇಸಿಗೆ ತರಬೇತಿ ಶಿಬಿರ ಏರ್ಪಡಿಸಲಾಗುತ್ತದೆ ಮತ್ತು ಕೆಲವು ಕ್ರೀಡೆಗಳಿಗೆ ಶುಲ್ಕವಿದ್ದು, ಇನ್ನು ಕೆಲವು ಕ್ರೀಡೆಗಳಿಗೆ ಉಚಿತವಾಗಿರುತ್ತವೆ.

ಕ್ರೀಡೆಗಳ ವಿವರ: ಸ್ವಿಮಿಂಗ್, ಬ್ಯಾಡ್ಮಿಂಟನ್, ವಾಲಿಬಾಲ್, ಕಬಡ್ಡಿ, ಖೋಖೋ, ನೆಟ್‌ಬಾಲ್, ಸ್ಕೇಟಿಂಗ್, ಅಥ್ಲೇಟಿಕ್ಸ್ ಬಾಲ್ ಬ್ಯಾಡ್ಮಿಂಟನ್, ಕ್ರಿಕೆಟ್, ಯೋಗ, ಕರಾಟೆ, ಚೆಸ್, ಕುದುರೆ ಸವಾರಿ, ಫುಟ್‌ಬಾಲ್, ಸಂಗೀತ ಸಾಧನಗಳು, ಸಾಹಸ ಕ್ರೀಡೆ/ ಟ್ರೆಕ್ಕಿಂಗ್, ಕುಸ್ತಿ. ಈ ಎಲ್ಲಾ ಕ್ರೀಡೆಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಆಸಕ್ತ ಯುವಕ, ಯುವತಿಯರು ಈ ಬೇಸಿಗೆತರಬೇತಿಶಿಬಿರದಲ್ಲಿವಿವಿಧ ಕ್ರೀಡೆಗಳಿಗೆ ತಮ್ಮ ಹೆಸರುಗಳನ್ನು ನೋಂದಾಯಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕ್ರೀಡಾ ಇಲಾಖೆ ಕಛೇರಿ ದೂರವಾಣಿ ಸಂಖ್ಯೆ: 08539–230121 ಕ್ಕೆ ಅಥವಾ ಕಛೇರಿಗೆ ಖುದ್ದಾಗಿ ಭೇಟಿ ನೀಡಿ ಸಂಪರ್ಕಿಸುವಂತೆ ಕೊಪ್ಪಳ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಳಕಲ್ ನಗರದ ಅಲ್ಪಸಂಖ್ಯಾತರ ಬಾಗವಾನ ಸಮಾಜ ಬಾಂಧವರ ಸತ್ಕಾರ ಸಮಾರಂಭ



**ಇಳಕಲ್ :** ನಗರದ ಅಲ್ಪಸಂಖ್ಯಾತರ ಬಾಗವಾನ ಸಮಾಜ ದವರಿಂದ ಎ,ಸಿ,ಓ ಶಾಲೆಯ ಹಿಂಭಾಗದಲ್ಲಿ ಇರುವ ಅಂಗನವಾಡಿ ಕೇಂದ್ರ ದಲ್ಲಿ ಪವಿತ್ರ ರಂಜಾನ್ ತಿಂಗಳಲ್ಲಿ ಅತ್ಯಂತ ಕ್ರಿಯಾಶೀಲರಾಗಿ ಸಮಾಜ ಮುಖಿ ಕೆಲಸ ನಿರ್ವಹಿಸುತ್ತಿರುವ ಸಮಾಜ ಬಾಂಧವರಿಗೆ ಸತ್ಕಾರ ಸಮಾರಂಭ ಏರ್ಪಡಿಸಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಸಮಾಜದ ಏಳಿಗೆಗಾಗಿ ಶ್ರಮಿಸುವ ಅತ್ಯಂತ ಕ್ರಿಯಾಶೀಲತೆಯಿಂದ ಸಮಾಜದ ಎಲ್ಲ ಬಂದವರೊಂದಿಗೆ ಹಸನ್ಮುಖಿಯಾಗಿ ಸಮಾಜದ ಕೆಲಸ ಕಾರ್ಯಗಳನ್ನು ನಿರ್ವಹಿಸುವ ಮೌಜ್ಞನರಾದ ಜನಾಬ ಸಿರಾಜ್ ಬಾಗವಾನ್ ರವರಿಗೆ ಸಮಾಜ ದವರಿಂದ ಗೌರವ ಪೂರ್ವಕವಾಗಿ ಕಾಣಿಕೆ ಕೊಟ್ಟು ಸತ್ಕರಿಸಿ ಗೌರವಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ಯನ್ನು ಅಲ್ಪಸಂಖ್ಯಾತರ ಬಾಗವಾನ ಸಮಾಜದ ಅಧ್ಯಕ್ಷರಾದ ಎಂ ಡಿ ಬಾಗವಾನ ವಹಿಸಿದ್ದರು ಅತಿಥಿಗಳಾಗಿ ಉಪಾಧ್ಯಕ್ಷ ಖಾಜಾಸಾಬ ಬಾಗವಾನ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಅಲ್ಪಸಂಖ್ಯಾತರ ಬಾಗವಾನ್ ಸಮಾಜದ ಕಾರ್ಯದರ್ಶಿ ಅಯ್ಯುಬ ಬಾಗವಾನ, ನಗರಸಭೆ ಸದಸ್ಯ ಹುಸೇನ್ ಬಾಗವಾನ್,ಆಸೀಮ ಬಾಗವಾನ, ಮಹಮ್ಮದ್ ಡಿ ಬಾಗವಾನ,ಮಹೆಬೂಬ ನೀಲುಗಲ್ಲ,ಮಹೆಬೂಬ ಜಿ ಬಾಗವಾನ, ಮ್ಯಾನೇಜರ್ ಎ ಕೆ ಬಾಗವಾನ ಸೇರಿದಂತೆ ಅನೇಕ ಸಮಾಜದ ಬಾಂಧವರು ಉಪಸ್ಥಿತರಿದ್ದರು.

# ಡಿ. ಕೆ. ಕೊಟ್ರಶೆಟ್ಟಿ ಫೌಂಡೇಶನ್ ವತಿಯಿಂದ ಮಹಿಳಾ ದಿನಾಚರಣೆ



**ರಬಕವಿ :** ಇಲ್ಲಿಯ ಡಿ. ಕೊಟ್ರಶೆಟ್ಟಿ ಫೌಂಡೇಶನ್ ಹಾಗೂ ಭಾರತ ಗ್ಯಾಸ್ ಸವಿ9ಸ್ ಜಂಟಿ ಸಹಯೋಗದಲ್ಲಿ ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ಸರ್ಕಾರಿ ಶಾಲಾ ಶಿಕ್ಷಕಿಯರಾದ ಶ್ರೀಮತಿ ಆಶಾ ಹಲಕುರ್ಕಿ, ಶ್ರೀಮತಿ ರೂಪಾ ಕರಡಿ, ಶ್ರೀಮತಿ ಸವಿತಾ ಕುಂಬಾರ ಅವರನ್ನು ಗೌರವಿಸಿ ಸನ್ಮಾನಿಸಲಾಯಿತು.

ಮಹಿಳೆಗೆ ಎಲ್ಲಿ ಪೂಜೆ ಸಲ್ಲುತ್ತದೆಯೊ ಅಲ್ಲಿ ದೇವತೆ ವಾಸಿಸುತ್ತಾರೆ. ಮಹಿಳೆಯರು ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕವಾಗಿ ಸ್ವಾವಲಂಬಿ ಬದುಕನ್ನು ಸಾಗಿಸುವಂತಾಗಬೇಕು ಎಂದು ಶಿಕ್ಷಕಿ ಶ್ರೀಮತಿ ರೂಪಾ ಕರಡಿ ಹೇಳಿದರು.

ಇಂದುಮಹಿಳೆಯರುಸಬಲರಾಗಿಪ್ರತಿಯೊಂದುಕ್ಷೇತ್ರದಲ್ಲಿಸಾಧನೆಯನ್ನು ಮಾಡಿ ಪುರುಷರಿಗೆ ಸಮಬಲರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ ಎಂದು ಶಿಕ್ಷಕ ಮಲ್ಲಿಕಾರ್ಜುನ ಗಡೆನ್ನವರ ಮಾತನಾಡಿದರು.

ಮಹಿಳೆಯರು ಇಂದು ಪುರುಷರಿಗೆ ಮಾತ್ರ ಮೀಸಲಾಗಿದ್ದ ಕ್ಷೇತ್ರಗಳಲ್ಲಿಯೂ ಕೂಡ ಪಾದಾರ್ಪಣೆ ಮಾಡಿ ಕಾರ್ಯ ನಿರ್ವಹಿಸಿ ಸ್ವಾವಲಂಬಿಗಳಾಗಿ ಬದುಕನ್ನು ಸಾಗಿಸಿದ್ದಾರೆ ಎಂದು ವಿಜಯಕುಮಾರ ಹಲಕುರ್ಕಿ ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಫೌಂಡೇಶನ್ ಅಧ್ಯಕ್ಷ ಸೋಮಶೇಖರ ದುಂಡಪ್ಪ ಕೊಟ್ರಶೆಟ್ಟಿ ಅವರು ವಹಿಸಿಕೊಂಡಡಿದ್ದರು. ಪ್ರಾರಂಭದಲ್ಲಿ ಶಿಕ್ಷಕಿಯರೊಂದಿಗೆ ಸಸಿಗೆ ನೀರೆರೆದು ಸಮಾರಂಭಕ್ಕೆ ಚಾಲನೆ ನೀಡಿದರು. ಭಾರತ್ ಗ್ಯಾಸ್ ಸಂಸ್ಥೆಯ ಎಲ್ಲಾ ಸಿಬ್ಬಂದಿಯವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

# ಲೋಕ ಅದಾಲತ್‌ನಲ್ಲಿ ಒಂದಾದ ನಾಲ್ಕು ಜೋಡಿ ದಂಪತಿಗಳು



**ರಬಕವಿ–ಬನಹಟ್ಟಿ :** ಗಂಡ ಹೆಂಡತಿ ತಮ್ಮಲ್ಲಿಯ ಮನಸ್ತಾಪಗಳನ್ನು ಮರೆತು ಉತ್ತಮ ಜೀವನವನ್ನು ನಡೆಸಬೇಕು. ಗಂಡ ಹೆಂಡತಿ ಜಗಳ ಉಂಡು ಮಲಗುವ ತನಕ ಎಂಬ ಗಾದೆ ಮಾತಿನಂತೆ ಇರಬೇಕು. ಲೋಕ ಅದಾಲತ್ ನಲ್ಲಿ ಪ್ರಕರಣಗಳನ್ನು ಬಗೆ ಹರಿಸಿಕೊಳ್ಳುವುದರಿಂದ ಭವಿಷ್ಯದಲ್ಲಿ ಮತ್ತೆ ಉತ್ತಮ ಸಂಬಂಧಗಳನ್ನು ಬೆಸೆದು ಕೊಳ್ಳಬಹುದಾಗಿದೆ ಎಂದು ಬನಹಟ್ಟಿ ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶ ಆಶಪ್ಪ ಸಣಮನಿ ತಿಳಿಸಿದರು.

ಅವರು ಶನಿವಾರ ಇಲ್ಲಿನ ನ್ಯಾಯಾಲಯದಲ್ಲಿ ನಡೆದ ರಾಷ್ಟ್ರೀಯ ಲೋಕ ಅದಾಲತ್ ಗೆ ಚಾಲನೆ ನೀಡಿ ಮಾತನಾಡಿದರು.

ಲೋಕ ಅದಾಲತ್ ಯಶಸ್ಸಿಗೆ ಪಕ್ಷಗಾರರ ಮತ್ತು ವಕೀಲರ ಸಹಕಾರ ಅತ್ಯಂತ ಮಹತ್ವದ್ದಾಗಿದೆ. ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಲಯದಲ್ಲಿ 205 ಪ್ರಕರಣಗಳಲ್ಲಿ 69 ಪ್ರಕರಣಗಳು ಬಗೆಹರೆದಿದ್ದು, 1,72,55,100 ಪರಿಹಾರ ಮೊತ್ತವನ್ನು ನೀಡಲಾಗಿದೆ ಎಂದು ನ್ಯಾಯಾಧೀಶ ಸಣಮನಿ ತಿಳಿಸಿದರು.

ಕಿರಿಯ ಶ್ರೇಣಿಯ ನ್ಯಾಯಾಧೀಶೆ ಸುಷ್ಮಾ ಟಿ. ಸಿ. ಮಾತನಾಡಿ, 734 ಪ್ರಕರಣಗಳಲ್ಲಿ 457 ಪ್ರಕರಣಗಳು ರಾಜಿಯಾಗಿದ್ದು, ರೂ. 1,38,48,684 ಪರಿಹಾರ ಮೊತ್ತವನ್ನು ನೀಡಲಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನಾಲ್ಕು ದಂಪತಿ ಜೋಡಿಗಳು ಪ್ರಕರಣವನ್ನು

ಹಿಂದಕ್ಕೆ ಪಡೆದುಕೊಂಡು ನ್ಯಾಯಾಧೀಶರ ಸಮ್ಮುಖದಲ್ಲಿ ಮತ್ತೇ ಒಂದಾದರು.

ವಕೀಲರಾದ ವಿಜಯಲಕ್ಷ್ಮಿ ಕೌಲಾಪುರ ಮತ್ತು ಆದಿನಾಥ ಸಂಕಾರ ಸಂಧಾನಕಾರರಾಗಿದ್ದರು. ವಕೀಲರ ಸಂಘದ ಅಧ್ಯಕ್ಷ ಶ್ರೀಕಾಂತ ಕುಲಕರ್ಣಿ, ಕಾರ್ಯದರ್ಶಿ ಎಸ್. ಜಿ. ಸಲಬನ್ನವರ, ಸಹ ಕಾರ್ಯದರ್ಶಿ ಪಿ. ಜಿ. ಪಾಟೀಲ,

ಈಶ್ವರಚಂದ್ರ ಭೂತಿ, ಮಹಾಂತೇಶ ಪದಮಗೊಂಡ, ಭೀಮಶಿ ಯಲ್ಲಟ್ಟಿ,

ಅಶ್ವಿನಿ ಹಾರೂಗೇರಿ, ಮುಕುಂದ ಕೋಪರ್ಡೆ, ಶಶಿ ಮೋಪಗಾರ, ಚನ್ನು ಮಾಲಾಪುರ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

# ವಿದ್ಯಾರ್ಥಿ ಜೀವನ ಅಮೂಲ್ಯ ಅದನ್ನು ಸಂಭ್ರಮಿಸಿ

**ರಬಕವಿ–ಬನಹಟ್ಟಿ :** ಆತ್ಮವಿಶ್ವಾಸ, ಅತ್ಯುತ್ಸಾಹ, ಕುತೂಹಲ, ಅನ್ವೇಷಣಾಬುದ್ಧಿ ಇವುಗಳ ಅತ್ಯುನ್ನತ ಸಂಗಮವೇ ವಿದ್ಯಾರ್ಥಿ ಜೀವನ. ವಿದ್ಯಾರ್ಥಿ ಜೀವನ ಅಮೂಲ್ಯ. ವಿದ್ಯಾರ್ಥಿಗಳು ಈ ಜೀವನವನ್ನು ಸಂಭ್ರಮಿಸಿ ಸಾಧನೆ ಮಾಡಿ ತೋರಿಸಿ ಎಂದು ಹಿರಿಯ ಸಾಹಿತಿ ಡಾ. ಶಾರದಾ ಮುಳ್ಳೂರ ತಿಳಿಸಿದರು.

ರಾಮಪುರದ ಎಮ್. ಪಿ. ಬಿಳ್ಳೂರ ಸರ್ಕಾರಿ ಪ್ರೌಢಶಾಲೆಯಲ್ಲಿ ನಡೆದ ವಾರ್ಷಿಕೋತ್ಸವ ಹಾಗೂ 10 ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಮುಖ್ಯ ಅತಿಥಿಗಳಾಗಿ ಅವರು ಮಾತನಾಡುತ್ತಿದ್ದರು. ಸೃಜನಶೀಲತೆ, ಕ್ರಿಯಾಶೀಲತೆ, ಪ್ರತಿಭೆ, ನಿರಂತರ ಪ್ರಯತ್ನ ಇವು ವಿದ್ಯಾರ್ಥಿಗಳ ಲಕ್ಷಣಗಳು. ಇಂದಿನ ಜಗತ್ತಿನಲ್ಲಿ ನಾವು ಪ್ರಕಾಶಮಾನವಾಗಿ ಬೆಳಗಬೇಕಾದರೆ ಕಷ್ಟಪಟ್ಟುಓದುವಹವ್ಯಾಸಬೆಳೆಸಿಕೊಳ್ಳಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕನ್ನಡ



ಶಿಕ್ಷಕಿ ಗೀತಾ ಫಕೀರಪೂರ ಶಾಲೆಯ ಪ್ರತಿಯೊಬ್ಬ ಶಿಕ್ಷಕರಿಂದ ಒಂದೊಂದು ಗುಣಗಳನ್ನು ಮಕ್ಕಳು ಕಲಿಯುತ್ತಾರೆ. ಮಕ್ಕಳು ಅವುಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮುಂದಿನ ಗುರಿಯತ್ತ ಹೆಜ್ಜೆ ಹಾಕಬೇಕು ಎಂದರು.

ವರದಿ ವಾಚನ ಮಾಡಿದ ಶಿಕ್ಷಕ ಶ್ರೀಶೈಲ ಬುರ್ಲಿ ಶಾಲೆಯಲ್ಲಿ ವರ್ಷಪೂರ್ತಿ ನಡೆದ ಸಾಂಸ್ಕೃತಿಕ, ಕ್ರೀಡೆ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ವಿವರಿಸಿ ಈ ಶಾಲೆಯ ಮಕ್ಕಳು ಎಲ್ಲ ರಂಗಗಳಲ್ಲಿಯೂ ಪ್ರತಿಭಾವಂತರಾಗಿದ್ದಾರೆ ಎಂದರು.

ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದ ಮುಖ್ಯ ಗುರು ಮಹೇಶ ಘಾಟಗೆ,

ಮಕ್ಕಳು ಇಲ್ಲಿ ಕಲಿತಿರುವ ಅನುಭವವನ್ನು ತಮ್ಮ ಮುಂದಿನ ಜೀವನಕ್ಕೆ ದಾರಿದೀಪ ಮಾಡಿಕೊಂಡು ಆದರ್ಶ ಪ್ರಜೆಗಳಾಗಿ ಬಾಳಬೇಕು. ವಿದ್ಯಾರ್ಥಿ ಜೀವನದಲ್ಲಿ ಮಾನವೀಯತೆ ಹಾಗೂ ಸಂಸ್ಕಾರ ಬಹಳ ದೊಡ್ಡದು ಎಂದರು.

ಎಸ್. ಡಿ. ಎಂ. ಸಿ. ಅಧ್ಯಕ್ಷ ಪ್ರಕಾಶ ಶಿರಹಟ್ಟಿ ಕಾರ್ಯಕ್ರಮ ಉದ್ಘಾಟಿಸಿದರು. ಉಪಾಧ್ಯಕ್ಷೆ ರೇಖಾ ಸೋನೊನಿ, ರೇವಣಸಿದ್ಧ ಮುಗಳಖೋಡ, ಡಿ. ಎಲ್. ದಾನವಾಡಕರ, ಪ್ರಕಾಶ ಸಿಂಗನ್, ಅಶೋಕ ಸೋನೋನೆ ವೇದಿಕೆಯ ಮೇಲೆ ಆಸೀನರಾಗಿದ್ದರು. ಮಂಗಲಾ ಬಕರೆ, ನಂದಾ ಅರಳಿಕಟ್ಟಿ ಉಪಸ್ಥಿತರಿದ್ದರು.

ಕಳೆದ ವರ್ಷದ ಎಸ್. ಎಸ್. ಎಲ್. ಸಿ. ಸಾಧಕರನ್ನು ಹಾಗೂ ಕ್ರೀಡಾ ಸಾಧಕರನ್ನು ಈ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ರಾಜ್ಯಮಟ್ಟದ ಪ್ರಶಸ್ತಿ ವಿಜೇತ ಶಿಕ್ಷಕ ಬಿ. ಡಿ. ನೇಮಗೌಡ, ನಿಯೋಜಿತ ಶಿಕ್ಷಕ ನಜೀರ್ ಅಹ್ಮದ್ ಅವರನ್ನು ಸತ್ಕರಿಸಲಾಯಿತು.

ಎ. ಎ. ಮೋಮಿನ್ ಸೊಗಸಾಗಿ ನಿರೂಪಿಸಿದರು. ಅಪ್ಪಾಸಾಬ ತುಬಚಿ ಸ್ವಾಗತಿಸಿದರೆ, ಪರಶುರಾಮ ಜಮಾದಾರ ವಂದಿಸಿದರು.

# ತೇರದಾಳ ಪೊಲೀಸ್ ಠಾಣೆಯಲ್ಲಿ ಶಾಂತಿ ಸಭೆ

**ತೇರದಾಳ :** ದೇಶದಲ್ಲಿ ಸಾಕಷ್ಟು ಭಾಷೆ, ಧರ್ಮಗಳಿದ್ದರೂ ಎಲ್ಲರೂ ಒಂದಾಗಿ ಇದ್ದೇವೆ ಎಂದರೆ ಅದಕ್ಕೆ ನಮ್ಮಲ್ಲಿನ ಸೌಹಾರ್ದತೆಯ ಗುಣ ಪ್ರಮುಖವಾಗಿದೆ. ನಾವು ಆಚರಿಸುವ ಹಬ್ಬಗಳಿಂದ ಸೌಹಾರ್ದತೆ ಮತ್ತಷ್ಟು ಗಟ್ಟಿಗೊಳ್ಳಬೇಕೆಂದು ಬನಹಟ್ಟಿ ಸಿಪಿಐ ಸಂಜೀವ ಬಳಗಾರ ಹೇಳಿದರು.

ಶನಿವಾರ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಹೋಳಿ ಹಾಗೂ ರಮ್ಜಾನ್ ಹಬ್ಬದ ನಿಮಿತ್ಯ ಹಮ್ಮಿಕೊಂಡಿದ್ದ ಶಾಂತಿ ಪಾಲನೆ ಸಭೆಯಲ್ಲಿ ಅವರು ಮಾತನಾಡಿದರು. ಈಗಾಗಲೇ

ದ್ವಿತೀಯ ಪಿಯುಸಿ ಪರೀಕ್ಷೆಗಳು ನಡೆಯುತ್ತಿವೆ. ಆದ್ದರಿಂದ ಪರೀಕ್ಷೆಗೆ ಹೋಗುವ ವಿದ್ಯಾರ್ಥಿಗಳಿಗೆ, ಬೈಕ್ ವಾಹನಗಳ ಮೇಲೆ ಹೋಗುವ ಪ್ರಯಾಣಿಕರಿಗೆ ಬಣ್ಣ ಹಚ್ಚಬೇಡಿ.

ಅದರಂತೆ ರಾಸಾಯನಿಕ ಮಿಶ್ರಿತ ಬಣ್ಣ ಬಳಸದೆ, ಪೌಡರ್ ಬಣ್ಣದಿಂದ ಆಟವಾಡಿ ಎಂದು ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪಿಎಸ್‌ಐ ಅಪ್ಪಣ್ಣ ಐಗಳಿ, ವಿದ್ಯಾರ್ಥಿಗಳು ಪರೀಕ್ಷೆ ಹಿನ್ನೆಲೆಯಲ್ಲಿ ಅಭ್ಯಾಸದಲ್ಲಿ ತೊಡಗಿರುತ್ತಾರೆ.

ಆದ್ದರಿಂದರಾತ್ರಿವೇಳೆಹಲಗಿಬಾರಿಸದಂತೆನಿಮ್ಮನಿಮ್ಮ ಭಾಗಗಳಲ್ಲಿ ಹೇಳಿರಿ ಎಂದು ಮುಖಂಡರಿಗೆ ಸಲಹೆ ನೀಡಿದರು. ಪ್ರಮುಖರಾದ ಪ್ರವೀಣ ನಾಡಗೌಡ, ನೇಮಣ್ಣ ಸಾವಂತನವರ, ಮಾಸೂಮ್ ಇನಾಂದಾರ, ಸಚಿನ ಮುರಗುಂಡಿ ತಮ್ಮ ಅನಿಸಿಕೆಗಳನ್ನು ಹೇಳಿದರು. ಗೌತಮ ರೋಡಕರ, ಸುರೇಶ ಕಬಾಡಗಿ, ಧರೇಶ ಹುದ್ದಾರ, ಶಂಕರ ಕುಂಬಾರ, ಕೇದಾರಿ ಪಾಟೀಲ, ಮಹಾವೀರ ಮಗದುಮ್, ಸಂತೋಷ ಅಕ್ಕೆನ್ನವರ, ವಿಠ್ಠಲ ತಟ್ರಿ, ನಿಂಗಪ್ಪ ನಿಲಜಗಿ, ಫಜಲ್ ಅತಾರಾವುತ್, ವಿವೇಕ ಸುವರ್ಣಖಂಡಿ, ಸಾಗರ ಲಗಳಿ, ಆನಂದ ಮಧುಮಲಿ ಇನ್ನಿತರರು ಭಾಗವಹಿಸಿದ್ದರು.

# ಸಾಂಗವಾಗಿ ನೆರವೇರಿದ ಮಹಿಳಾ ದಿನಾಚರಣೆ ಸಪ್ತಾಹ

**ಜಮಖಂಡಿ:** ಇಲ್ಲಿಯ ಸರಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಸಾಂಸ್ಕೃತಿಕ ಘಟಕ, ಮಹಿಳಾ ಸಬಲೀಕರಣ ಹಾಗೂ ಐ.ಕ್ಯೂ.ಎ.ಸಿ. ಸಹಯೋಗದೊಂದಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಮಾರ್ಚ್ 8 ರಂದು ಅದ್ದೂರಿಯಾಗಿ ಆಚರಿಸಲಾಯಿತು.

ಮುಖ್ಯ ಅತಿಥಿಗಳಾಗಿ ಶ್ರೀಮತಿ ಆಶಾದೇವಿ ಜಗದೀಶ ಗುಡಗುಂಟಿ, ಗೌರವಾಧ್ಯಕ್ಷರು, ಭ್ರಮರಾಂಬ ಮಹಿಳಾ ಮಂಡಳ, ಜಮಖಂಡಿ ಇವರು ಆಗಮಿಸಿ ವಿದ್ಯಾರ್ಥಿನಿಯರನ್ನು ಕುರಿತು, "ವಿದ್ಯೆವುಳ್ಳವನ ಮುಖವು । ಮುದ್ದು ಬರುವಂತಿಕ್ಕು । ವಿದ್ಯೆಯಿಲ್ಲದವನ ಬರಿ ಮುಖವು, ಹಾಳೂರ । ಹದ್ದಿನಂತಿಕ್ಕು ಸರ್ವಜ್ಞ ॥ ಎಂಬಂತೆ ವಿದ್ಯೆಯು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವ ಮಹತ್ವದ ಅಂಶವಾಗಿದೆ. ಇದರಿಂದ ವ್ಯಕ್ತಿಯ ಮುಖದಲ್ಲಿ ಗೌರವ ಮತ್ತು ಮಧುರತೆ ಮೂಡುತ್ತದೆ.

ಆದರೆ, ವಿದ್ಯೆಯಿಲ್ಲದ ವ್ಯಕ್ತಿಯ ಮುಖದಲ್ಲಿ ಕಠೋರತೆ ಮತ್ತು ಶೂನ್ಯತೆ ಕಾಣಿಸಿಕೊಳ್ಳುತ್ತದೆ ಎಂದು ಹೇಳುತ್ತಾ ವಿದ್ಯೆಯ ಹಾಗೂ ಮಹಿಳಾ ದಿನಾಚರಣೆಯ ಮಹತ್ವವನ್ನು ತಿಳಿಸಿದರು. ಪತಿ–ಪತ್ನಿಯರು ಪರಸ್ಪರ ಸಮಾನವಾಗಿರಬೇಕು ಎಂಬ ನಿಲುವು ಮುಖ್ಯವಾಗಿದೆ. ವಿಚ್ಛೇದನ ಎಂಬುದು ಕೇವಲ ವ್ಯಕ್ತಿಯೊಂದರ ನಿರ್ಧಾರವಾಗಿರದೆ, ಇದು ಪತಿ ಮತ್ತು ಪತ್ನಿ ಇಬ್ಬರ ಸಮಾನ ಪಾಲಿನ ಹೊಣೆಯಾಗಿದೆ. ಲಿಂಗ ತಾರತಮ್ಯವನ್ನು ತೊಡೆದು ಹಾಕಲು ಮಹಿಳಾ ಸಮಾನತೆಯ ಕುರಿತು ಚಿಂತನೆ ನಡೆಯಬೇಕು. ಮಹಿಳಾ ಶಕ್ತಿ ಮತ್ತು ಅವರ ಸಾಧನೆಗಳು ನಮಗೆ ಶಕ್ತಿದಾಯಕ ಉದಾಹರಣೆಗಳಾಗಿವೆ. ಇಂದಿರಾ ಗಾಂಧಿ ಭಾರತದ ಮೊದಲ ಮಹಿಳಾ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿ ದೇಶದ ಅಭಿವೃದ್ಧಿಗೆ ಅನೇಕ ಕೊಡುಗೆಗಳನ್ನು ನೀಡಿದರು. ದೇಶದ ಪ್ರಸ್ತುತ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾರತದ ಮೊದಲ ಆದಿವಾಸಿ ಜನಾಂಗದ ಮಹಿಳಾ ರಾಷ್ಟ್ರಪತಿಯಾಗಿದ್ದಾರೆ. ಅನಾಥ ಮಕ್ಕಳ ತಾಯಿ ಮದರ್ ಥೇರೇಸಾ ಅವರ ಸೇವಾಭಾವ, ಕಿತ್ತೂರು ಚೆನ್ನಮ್ಮನ ಶೌರ್ಯ ಮತ್ತು ಕಿರಣ್ ಬೇಡಿಯ ಸಮರ್ಥತೆ ಇವೆಲ್ಲವೂ ಮಹಿಳೆಯರ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತವೆ. ಅಕ್ಷರದ ಅವ್ವ ಸಾವಿತ್ರಿಬಾಯಿ ಫುಲೆ, ಭಾರತದ ಪ್ರಥಮ ಮಹಿಳಾ ಶಿಕ್ಷಕಿ, ಮಹಿಳೆಯರು ಶಿಕ್ಷಣ ಪಡೆಯಲು ದಾರಿ ತೆರೆದವರು. ಅವರ ಪರಿಶ್ರಮದಿಂದ ಇಂದಿನ ಸಮಾಜದಲ್ಲಿ ಮಹಿಳಾ ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕಿದೆ. ನಾವು ಅವರ ಆದರ್ಶಗಳನ್ನು ಅನುಸರಿಸಿ ಮಹಿಳಾ ಸಮಾನತೆಗೆ ಮತ್ತು ಶಿಕ್ಷಣಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು. ನಾವು ಪ್ರತಿಯೊಬ್ಬರ ಅಭಿಪ್ರಾಯ ಮತ್ತು ಆಚರಣೆಗಳಿಗೆ ಗೌರವ ನೀಡಬೇಕು. ಸಮಾಜದಲ್ಲಿ ಎಲ್ಲರಿಗೂ ಸಮಾನ ಅವಕಾಶವನ್ನು ಕಲ್ಪಿಸುವುದು ನಮ್ಮ ಕರ್ತವ್ಯವಾಗಿದೆ. ಲಿಂಗ ತಾರತಮ್ಯ ಮಾಡುವುದನ್ನು ಬಿಟ್ಟು, ಪ್ರತಿಯೊಬ್ಬರೂ ತಮ್ಮ ಕರ್ತವ್ಯಗಳನ್ನು ನಿಭಾಯಿಸಿಕೊಂಡು ಮುಂದುವರಿಯಬೇಕು. ಈ ನಿಲುವುಗಳು ಸಮಾಜವನ್ನು ಪ್ರಗತಿಯ ದಾರಿಯಲ್ಲಿ ಮುನ್ನಡೆಸಲು ಸಹಾಯಕವಾಗುತ್ತವೆ ಎಂದು ಮಾಮಿ9ಕವಾಗಿ ಹೇಳಿದರು.

ಇನ್ನೋರ್ವ ಮುಖ್ಯ ಅತಿಥಿಗಳಾದ ಶ್ರೀಮತಿ ಸೋನವ್ವ ಭೋಜಪ್ಪಗೋಳ, ರಾಜ್ಯ ಪ್ರಶಸ್ತಿ ಪುರಸ್ಕೃತರು, ಜಾನಪದ ಕಲಾವಿದರು, ಹುನ್ನೂರ ಇವರು ಮಹಿಳೆಯ ಮಹತ್ವವನ್ನು ಹಾಡು ಹಾಗೂ ಅಭಿನಯದ ಮೂಲಕ ಅಭಿವ್ಯಕ್ತ ಪಡಿಸಿದರು.

ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲೆ ಡಾ. ಸುನಂದಾ ಎಸ್. ಶಿರೂರ ಅವರು ತಮ್ಮ ಅಧ್ಯಕ್ಷೀಯ ನುಡಿಗಳಲ್ಲಿ "ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯು ಪ್ರತಿ ವರ್ಷ ಮಾರ್ಚ್ ಎಂಟರಂದು ವಿಶ್ವದಾದ್ಯಂತ ಆಚರಿಸಲಾಗುತ್ತದೆ. ಈ



ದಿನವನ್ನು ಮಹಿಳೆಯರ ಹಕ್ಕುಗಳು, ಸಾಧನೆಗಳು ಮತ್ತು ಅವರ ಸಂಕಷ್ಟಗಳ ಕುರಿತು ಜಾಗೃತಿಯನ್ನು ಮೂಡಿಸಲು ಮತ್ತು ಲಿಂಗ ಸಮಾನತೆಗೆ ಪ್ರೋತ್ಸಾಹ ನೀಡಲು ನಿಶ್ಚಿತಗೊಳಿಸಲಾಗಿದೆ. ಮಹಿಳೆಯರು ಸಮಾಜದ ಪ್ರತಿಯೊಂದು ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸುತ್ತಿದ್ದಾರೆ. ಕುಟುಂಬ ನಿರ್ವಹಣೆ ಹಿಡಿದು ವಿಜ್ಞಾನ, ತಂತ್ರಜ್ಞಾನ, ರಾಜಕೀಯ, ಕಲೆ, ಕ್ರೀಡೆ ಹಾಗೂ ಉದ್ಯಮಗಳವರೆಗೆ ತಲೆಮಾರುಗಳಿಂದಲೂ ಮಹಿಳೆಯರು ಅನೇಕ ಅಡೆತಡೆಗಳನ್ನು ಎದುರಿಸುತ್ತಾ, ತಮ್ಮ ಹಕ್ಕುಗಳಿಗೆ ಹೋರಾಡುತ್ತಾ ಬಂದಿದ್ದಾರೆ. ಮುಂಚಿನ ಕಾಲದಲ್ಲಿ ಮಹಿಳೆಯರು ಶಿಕ್ಷಣ, ಉದ್ಯೋಗ ಹಾಗೂ ರಾಜಕೀಯದಲ್ಲಿ ಪ್ರಾತಿನಿಧ್ಯ ಹೊಂದಲು ಹೆಚ್ಚು ಕಠಿಣ ಪ್ರಯತ್ನ ಮಾಡಬೇಕಾಗಿತ್ತು.

ಆದರೆ, ಧೀರ ಮಹಿಳೆಯರ ಪರಿಶ್ರಮದಿಂದ, ಈಗ ಮಹಿಳೆಯರು ಪ್ರಪಂಚದ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಈ ದಿನವು ಮಹಿಳೆಯರ ಮೇಲೆ ನಡೆಯುವ ಅನ್ಯಾಯಗಳನ್ನು ಅರ್ಥಮಾಡಿಕೊಳ್ಳಲು ಮತ್ತು ಅವರಿಗಾಗಿ ಸೂಕ್ತ ನೀತಿಗಳನ್ನು ರೂಪಿಸಲು ಪ್ರೇರಣೆ ನೀಡುತ್ತದೆ. ಇಂದಿಗೂ ಹಲವಾರು ಸ್ಥಳಗಳಲ್ಲಿ ಮಹಿಳೆಯರು ಲೈಂಗಿಕ ಅಸಮಾನತೆ, ಹಿಂಸೆ, ವೇತನ ವ್ಯತ್ಯಾಸ, ಮತ್ತು ಸಾಂಸ್ಕೃತಿಕ ನಿರ್ಬಂಧಗಳಿಗೆ ಒಳಗಾಗುತ್ತಿದ್ದಾರೆ. ಮಹಿಳಾ ದಿನಾಚರಣೆ ಎಂಬುದು ಕೇವಲ ಒಂದು ಹಬ್ಬವಲ್ಲ, ಮಹಿಳೆಯರ ಹಕ್ಕುಗಳಿಗಾಗಿ ಹೋರಾಟವನ್ನು ಮುಂದುವರಿಸಲು ಮತ್ತು ಸಮಾನತೆಯತ್ತ ಸಾಗಲು ಒಂದು ಹೆಜ್ಜೆಯಾಗಬೇಕು. ಈ ದಿನವನ್ನು ಕೇವಲ ಶುಭಾಶಯಗಳ ಮೂಲಕ ಸೀಮಿತಗೊಳಿಸದೆ, ಮಹಿಳೆಯರ ಬಲವರ್ಧನೆಗಾಗಿ ಪ್ರಾಯೋಗಿಕ ಪಾಠಗಳನ್ನು ಕಲಿಯಬೇಕು. ಲಿಂಗ ಸಮಾನತೆ ಕೇವಲ ಮಹಿಳೆಯರ ಹೊಣೆಗಾರಿಕೆ ಅಲ್ಲ, ಅದು ಒಂದು ಸಮಗ್ರ ಸಮಾಜದ ಮುನ್ನೋಟವಾಗಬೇಕು. ಈ ಹಿನ್ನೆಲೆಯಲ್ಲಿ, ಅಂತರಾಷ್ಟ್ರೀಯ ಮಹಿಳಾ ದಿನವು ಮಹಿಳೆಯರ ತ್ಯಾಗ, ದುಡಿಮೆ, ಮತ್ತು ಸಾಧನೆಗಳನ್ನು ಗೌರವಿಸುವ ದಿನವಾಗಿರಬೇಕು ಮತ್ತು ಲಿಂಗ ಸಮಾನತೆ ಎಂಬ ಮಹತ್ವಾಕಾಂಕ್ಷೆಯನ್ನು ಸಾಧಿಸಲು ಒಂದು ಪ್ರೇರಣೆಯಾಗಬೇಕು ಎಂದು ನುಡಿದರು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ನಮ್ಮ ಕಾಲೇಜಿನಲ್ಲಿ ಮಹಿಳಾ ಸಪ್ತಾಹ ನಿಮಿತ್ಯ ವಿಶೇಷ ಉಪನ್ಯಾಸ ಮಾಲೆ ಹಾಗೂ ವಿವಿಧ ಕಲಾತ್ಮಕ ಹಾಗೂ ಸಾಂಸ್ಕೃತಿಕ ಸ್ಪರ್ಧಾ ಕಾರ್ಯಕ್ರಮವನ್ನು ಮಾರ್ಚ್ ಒಂದರಿಂದ ಏಳರವರೆಗೆ ಮಹಿಳಾ ದಿನಾಚರಣೆ ಅಂಗವಾಗಿ ಸಪ್ತಾಹ ಹಮ್ಮಿಕೊಳ್ಳಲಾಯಿತು.

ಮಾರ್ಚ್ 1 ರಂದು ಕಾಲೇಜಿನ ಪ್ರಾಂಶುಪಾಲರಾದ ಡಾ. ಸುನಂದಾ ಎಸ್. ಶಿರೂರ ಇವರು ಹಾಗೂ ಎಲ್ಲ ಬೋಧಕ ಸಿಬ್ಬಂದಿಯವರು ಸಸಿಗೆ ನೀರುಣಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದಿನಾಂಕ 3 ರಂದು ಸಂಪನ್ಮೂಲ ವ್ಯಕ್ತಿಗಳಾಗಿ ಪೂಜ್ಯ ಮಾತೋಶ್ರೀ ಪ್ರಮೀಳಾತಾಯಿ, ಶ್ರೀ ಜಗದೀಶ್ವರ ವಿರಕ್ತಮಠ, ಕಡಪಟ್ಟಿ–ಹಂಚಿನಾಳ ಇವರು ಆಗಮಿಸಿ ವಿದ್ಯಾರ್ಥಿನಿಯರ ಕುರಿತು 'ಮಹಿಳೆ ಮತ್ತು ಕುಟುಂಬ' ಎಂಬ ವಿಷಯದ ಮೇಲೆ ಮಾತನಾಡಿದರು. ದಿನಾಂಕ 4 ರಂದು ಸಂಪನ್ಮೂಲ ವ್ಯಕ್ತಿಗಳಾಗಿ ಬನಹಟ್ಟಿಯ ಶ್ರೀಮತಿ ಸುಭದ್ರಾ ಮಹಾಜನ, ಅಂಗನವಾಡಿ ಹಿರಿಯ ಮೇಲ್ವಿಚಾರಕರು, ಶಿಶು ಅಭಿವೃದ್ಧಿ ಇಲಾಖೆ, ಜಮಖಂಡಿ ಇವರು ಆಗಮಿಸಿ ವಿದ್ಯಾರ್ಥಿನಿಯರ ಕುರಿತು 'ಮಹಿಳಾ ಅಭಿವೃದ್ಧಿ ಕಾರ್ಯಕ್ರಮ' ಎಂಬ ವಿಷಯದ ಮೇಲೆ ಮಾತನಾಡಿದರು. ದಿನಾಂಕ 5 ರಂದು ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಚಿದಾನಂದ ಧವಳೇಶ್ವರ, ಸಹಾಯಕ ಪ್ರಾಧ್ಯಾಪಕರು, ಬಾಗಲಕೋಟ ವಿಶ್ವವಿದ್ಯಾಲಯ, ಜಮಖಂಡಿ ಇವರು ಆಗಮಿಸಿ, ವಿದ್ಯಾರ್ಥಿನಿಯರ ಕುರಿತು 'ಮಹಿಳೆ ಮತ್ತು ಸಮಾನತೆ' ಎಂಬ ವಿಷಯದ ಮೇಲೆ ಮಾತನಾಡಿದರು. ದಿನಾಂಕ 6 ರಂದು ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ರಘುವೀರ ಕುಲಕರ್ಣಿ, ಪ್ರಾಚಾರ್ಯರು ಮತ್ತು ಡೀನರು, ಕಾನೂನು ವಿಭಾಗ, ಬಿ.ಎಲ್.ಡಿ.ಇ.ಎ. ಡೀಮ್ಡ್ ವಿಶ್ವವಿದ್ಯಾಲಯ, ವಿಜಯಪುರ ಇವರು ಆಗಮಿಸಿ ವಿದ್ಯಾರ್ಥಿನಿಯರ ಕುರಿತು 'ಮಹಿಳೆ ಮತ್ತು ಕಾನೂನು' ಎಂಬ ವಿಷಯದ ಮೇಲೆ ಮಾತನಾಡಿದರು. ದಿನಾಂಕ 7 ರಂದು ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ವಿಜಯಲಕ್ಷ್ಮಿ ಬಾಬುರೆಡ್ಡಿ ತುಂಗಳ, ಸ್ತ್ರೀರೋಗ ತಜ್ಞರು, ಶಾರದಾ ಹಾಸ್ಪಿಟಲ್, ಜಮಖಂಡಿ ಇವರು ಆಗಮಿಸಿ ವಿದ್ಯಾರ್ಥಿನಿಯರ ಕುರಿತು 'ಮಹಿಳೆ ಮತ್ತು ಆರೋಗ್ಯ – ಗರ್ಭಕೋಶ ಕ್ಯಾನ್ಸರ್ ಅರಿವು ಮತ್ತು ಪರಿಹಾರ' ಎಂಬ ವಿಷಯದ ಮೇಲೆ ಮಾತನಾಡಿದರು.

ಕಾರ್ಯಕ್ರಮದ ಅಂಗವಾಗಿ ವೈಯಕ್ತಿಕ ನೃತ್ಯ, ಸಮೂಹ ನೃತ್ಯ, ಸವಿರುಚಿ / ಪಾಕ ಸ್ಪರ್ಧೆ, ಕೇಶ ವಿನ್ಯಾಸ, ಕಸದಿಂದ ರಸ, ಚಿತ್ರಕಲೆ, ಪೆನ್ಸಿಲ್ ಆರ್ಟ್, ವಸ್ತ್ರ ವಿನ್ಯಾಸ, ಮೋಜಿನ ವೇಷ ಹೀಗೆ ವಿವಿಧ ಕಲಾತ್ಮಕ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಗಳಲ್ಲಿ ಸುಮಾರು ಸಾವಿರಕ್ಕಿಂತಲೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿದ್ದರು. ಇಂದು ಎಲ್ಲಾ ಸ್ಪರ್ಧಾ ವಿಜೇತರಿಗೆ ಬಹುಮಾನ ಮತ್ತು ಪ್ರಮಾಣ ಪತ್ರವನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಐ.ಕ್ಯೂ.ಎ.ಸಿ. ಸಂಚಾಲಕರಾದ ಡಾ. ವಿ. ಆರ್. ದಳವಾಯಿ, ಸಿಬ್ಬಂದಿ ಕಾರ್ಯದರ್ಶಿಯಾದ ಡಾ. ಎಮ್. ಎಮ್. ಮಂಟೂರ, ಮಹಿಳಾ ಸಬಲೀಕರಣ ಘಟಕದ ಕಾರ್ಯಾಧ್ಯಕ್ಷರಾದ ಶ್ರೀಮತಿ ಶಿವಲೀಲಾ ಹೆಚ್., ಐ.ಕ್ಯೂ.ಎ.ಸಿ. ಸಹ–ಸಂಚಾಲಕರಾದ ಡಾ. ಸುನೀಲ ಮಣಕವಾಡ, ಎಸ್. ಕೆ. ಡೇಂಬರೆ, ಎ. ಎಸ್. ಪೂಜಾರಿ, ಡಾ. ಎಸ್. ಎಸ್. ಸಿದ್ದಾಪೂರ, ಆರ್. ಬಿ. ಶಿತೋಳೆ, ಅಮಿತ ಹಿರೇಮಠ, ರಾಜೇಶ ಜಾಧವ, ಶ್ರೀಮತಿ ಸುಮಾ ವೈ. ಎನ್., ಶ್ರೀಮತಿ ಪಾಟೀಲ ಸವಿತಾ, ಶ್ರೀಮತಿ ಶ್ರೀಮಯಿ ಎನ್., ಕು. ಜಬೀನಾ ಮೌಲ್ವಿ, ಶ್ರೀದೇವಿ ಕವಟಕೊಪ್ಪ , ಸರೋಜಾ ಮುಳಗುಂದ, ವಿಜಯಲಕ್ಷ್ಮಿ ಆಲೂರ, ಶಗುಪ್ತಾ ಬಿಸ್ತಿ, ರಾಜಶ್ರೀ ರಾಯಣ್ಣವರ, ಅಶ್ವಿನಿ ಬಬಲಿ, ನಮಿತಾ ವಸ್ತ್ರದಮಠ, ಡಾ. ಜಯಮ್ಮಾ, ಡಾ. ಸುಪ್ರಿಯಾ ಪಾಟೀಲ, ಸಂಗೀತಾ ಕೋಟ್ಯಾಳ, ಹಲೀಮಾ ಬಾಗವಾನ, ಅನಸೂಯಾ ಮಬ್ರುಮಕರ, ಸುಜಾತಾ ಬಸಪ್ಪಗೋಳ, ಮಹಾದೇವಿ, ಸುನಂದಾ ಮುಂತಾದವರು ಉಪಸ್ಥಿತರಿದ್ದರು.

# ಮಕ್ಕಳು ಬುದ್ಧಿವಂತರಾದಾಗ ವೃತ್ತಿಯ ಬದುಕು ಸಾರ್ಥಕ

**ಬೀಳಗಿ :** ಶಿಕ್ಷಕರು ಮಕ್ಕಳನ್ನು ಪ್ರತಿಭಾನ್ವಿತರನ್ನಾಗಿ ಮಾಡಿ ಸಮಾಜಕ್ಕೆ ಅರ್ಪಿಸುವ ಕೆಲಸ ಮಾಡಬೇಕು. ಮಕ್ಕಳು ಬುದ್ಧಿವಂತರಾದಾಗ ವೃತ್ತಿಯ ಬದುಕು ಸಾರ್ಥಕವಾಗುತ್ತದೆ ಎಂದು

ಶಾಲೆಯ ಗೌರವಾಧ್ಯಕ್ಷರಾದ ಜಾನಮಟ್ಟಿ–ಮರೇಗುದ್ದಿ ಅಡವಿ ಸಿದ್ಧೇಶ್ವರ ಮಠದ ಗುರುಪಾದ ಮಹಾಸ್ವಾಮಿಗಳು ಹೇಳಿದರು.

ತಾಲೂಕಿನ ಜಾನಮಟ್ಟಿ ಗ್ರಾಮದಲ್ಲಿ ಅಡವಿ ಸಿದ್ಧೇಶ್ವರ ಪ್ರಾಥಮಿಕ ಶಾಲೆಯ ವಾರ್ಷಿಕ ಸ್ನೇಹ ಸಮ್ಮೇಳನದ ಸಾನಿಧ್ಯವಹಿಸಿ ಮಾತನಾಡಿ, ಜ್ಞಾನ ರತ್ನ ಮಹಾ ದೊಡ್ಡದು. ಗಳಿಸಿದ ಸಂಪತ್ತು ಕಳೆಯಬಹುದು. ಆದರೆ ಪಡೆದ ಜ್ಞಾನ ಸಂಪತ್ತು ಹೋಗದು. ಪಾಲಕರು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿದರೆ ಉತ್ತಮ ಬದುಕು ಕಟ್ಟಿಕೊಳ್ಳುವರು ಎಂದು ಹೇಳಿದರು.

ಕ್ಷೇತ್ರಶಿಕ್ಷಣಾಧಿಕಾರಿ ಆರ್.ಎಸ್.ಆದಾಪೂರ ಮಾತನಾಡಿ, ಮಕ್ಕಳು ತರಗತಿ ಕೊಠಡಿಯಲ್ಲಿ ಜ್ಞಾನ, ಸಂಸ್ಕಾರ ಪಡೆದರೆ ಒಳ್ಳೆಯ ನಾಗರಿಕರಾಗಿ ಬದುಕಲು ಸಾಧ್ಯ. ಪಾಲಕರು ಮಕ್ಕಳಿಗಾಗಿ ಆಸ್ತಿ ಮಾಡದೇ, ಮಕ್ಕಳನ್ನೇ ಆಸ್ತಿಯನ್ನಾಗಿ ಮಾಡಿದರೆ ಕೀರ್ತಿವಂತ ಪ್ರಜೆಯಾಗಿ ಬದುಕುತ್ತಾರೆ. ಶಿಕ್ಷಕರು ಮತ್ತು ಪಾಲಕರು ಮಕ್ಕಳ ಭವಿಷ್ಯವನ್ನು ಉತ್ತಮವಾಗಿ ರೂಪಿಸಬೇಕೆಂದು ಹೇಳಿದರು.

ಕನ್ನಡ ಜಾನಪದ ಪರಿಷತ್ ಜಿಲ್ಲಾಧ್ಯಕ್ಷ ಡಿ.ಎಂ.ಸಾವಕಾರ, ಬಿಆರ್‌ಪಿ ಎಂ.ಬಿ.ಕಣಬೂರ ಮಾತನಾಡಿ, ಅಂದು ಸರ್ಕಾರ ಮಾಡಬೇಕಾದ ಕೆಲಸವನ್ನು ಮಠ ಮಠಾಧೀಶರು, ವಸತಿ, ಶಿಕ್ಷಣ, ಸಂಸ್ಕಾರ ನೀಡುವ ಮೂಲಕ ಸಮಾಜಕ್ಕೆ ಬಹುದೊಡ್ಡ ಕೊಡುಗೆ ನೀಡಿದ್ದಲ್ಲದೇ, ಗ್ರಾಮೀಣ ಪ್ರದೇಶದಲ್ಲಿ ಶೈಕ್ಷಣಿಕ ಕ್ರಾಂತಿಯಾಗಲು ಸಾಧ್ಯವಾಯಿತೆಂದು ಹೇಳಿದರು.

ವಿವಿಧ ವಸತಿ ಶಾಲೆಗಳಿಗೆ ಆಯ್ಕೆಯಾದ ಹದಿನಾಲ್ಕು ಜನ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಮಕ್ಕಳಿಂದ ಸಾಂಸ್ಕೃತಿಕ, ಮನರಂಜನಾ ಕಾರ್ಯಕ್ರಮಗಳು ಜರುಗಿದವು. ಎಸ್ಡಿಎಂಸಿ ಅಧ್ಯಕ್ಷ ಜೆ. ಆರ್. ವಟವಟಿ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಗುರುಮಾತೆ ಆರ್. ಬಿ. ಬರಗಾಲ ವರದಿ ವಾಚಿಸಿದರು.

ಮುಖ್ಯ ಅತಿಥಿಗಳಾಗಿ ಶಿಕ್ಷಣ ಸಂಯೋಜಕ ಜಗದೀಶ ಖೋತ, ಶಿಕ್ಷಣ ಇಲಾಖೆ ಅಧಿಕಾರಿಗಳಾದ ಬಿ. ಆರ್. ಲಮಾಣಿ, ಎಚ್. ಟಿ. ಸಣಗೌಡರ, ಎಂ. ಕೆ. ತೋಟದ, ವಿ. ಎನ್. ಸಾಲಾಪೂರ, ಆರ್. ಜಿ. ಕುಚನೂರ, ಸರ್ಕಾರಿ ನೌಕರರ ಸಂಘದ ನಿರ್ದೇಶಕ ಎಂ. ಬಿ. ಪೂಜಾರಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಎಸ್. ವಿ. ಪಾಟೀಲ, ವಿದ್ಯಾ ಸಂಸ್ಥೆಯ ಶಂಕರ ಡಬರಿ, ನಾರಾಯಣ ಕಂಬಾರ, ಅಡಿವೆಪ್ಪ ಹಳ್ಳೂರ, ಬಸವರಾಜ ಸಂಶಿ, ತಿಮ್ಮಣ್ಣ ಬೆಣ್ಣೂರ, ಯಲಗುರೇಶ ಬಂಡಿ, ಸೊಲಬನ್ನ ಡಂಗಿ ಮತ್ತಿತರರು ಉಪಸ್ಥಿತರಿದ್ದರು.

ಸುಧಾ ಡಬರಿ ಸ್ವಾಗತಿಸಿದರು. ಬೋರಮ್ಮ ಮುರನಾಳ ಸೊಗಸಾಗಿ ನಿರೂಪಿಸಿದರು. ರಮೇಶ ಸನ್ನಿ ವಂದಿಸಿದರು.

# ಮಹಿಳೆಯರಿಗೆ ಉನ್ನತ ವ್ಯಾಸಂಗ ಮುಖ್ಯವಾಗಿದೆ

**ರಬಕವಿ :** ಇಂದಿನ ದಿನಗಳಲ್ಲಿ ಗ್ರಾಮೀಣ ಭಾಗದ ಮಹಿಳೆಯರಲ್ಲಿ ಉನ್ನತ ಶಿಕ್ಷಣ ಮತ್ತು ಉತ್ತಮ ಆರೋಗ್ಯ ಮುಖ್ಯವಾಗಿದೆ ಎಂದು ಸಾಮಾಜಿಕ ಕಾರ್ಯಕರ್ತೆ ವಿದ್ಯಾ ಸವದಿ ತಿಳಿಸಿದರು.

ಅವರು ರಬಕವಿಯ ಮಲ್ಲಿಕಾರ್ಜುನ ಸಮುದಾಯ ಭವನದಲ್ಲಿ ಜ್ಯೋತಿ ಮಹಿಳಾ ಮಂಡಳದ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಹಿಳಾ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗಂಡು ಹೆಣ್ಣು ಸಮಾನತೆ, ಮಹಿಳೆಯರ ಹಕ್ಕುಗಳು ಮತ್ತು ಮಹಿಳಾ ಸಬಲೀಕರಣದಂತಹ ವಿಷಯಗಳ ಕುರಿತು ಚಿಂತನೆ ಬಹಳಷ್ಟು ಮುಖ್ಯವಾಗಿದೆ. ಮಹಿಳಾ ಸಾಧಕಿಯರನ್ನು ನಾವು ಗೌರವಿಸಬೇಕು.



ಮಹಿಳೆಯರು ತಮ್ಮ ಮಕ್ಕಳಿಗೆ ಉತ್ತಮ ಸಂಸ್ಕಾರ ನೀಡಿದರೆ ಮುಂದಿನ ದಿನಗಳಲ್ಲಿ ಉತ್ತಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ವಿದ್ಯಾ ಸವದಿ ತಿಳಿಸಿದರು.

ಜ್ಯೋತಿ ಮಹಿಳಾ ಮಂಡಳದ ಅಧ್ಯಕ್ಷೆ ಮಧುಮತಿ ಕರಡಿಗುದ್ದಿ ಮಾತನಾಡಿ, ವಿಶ್ವದ ವಿವಿಧ ಕ್ಷೇತ್ರಗಳ ಅಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವು ಪ್ರಮುಖವಾಗಿದೆ. ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ಮಹಿಳೆಯರು ಸಾಕಷ್ಟು ಅಭಿವೃದ್ಧಿಯನ್ನು ಸಾಧಿಸಿದ್ದಾರೆ.

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಗೆ ಇನ್ನಷ್ಟು ಅವಕಾಶಗಳು ಅಗತ್ಯವಾಗಿವೆ. ಈ ದಿಶೆಯಲ್ಲಿ ಚಿಂತನೆಗಳು ಅಗತ್ಯವಾಗಿವೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮಹಿಳಾ ಸಾಧಕಿಯರಾದ ಗೂಡಂಗಡಿ ಇಟ್ಟು ಉಪಜೀವನ ಸಾಗಿಸುತ್ತಿರುವ ಕಾವೇರಿ ಲಮಾಣಿ ಮತ್ತು ಮೂರ್ತಿ ಕಲಾವಿದೆ ವೀಣಾ ಚವ್ಹಾಣ ಇವರನ್ನು ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಮಹಿಳೆಯರಿಗಾಗಿ ವಿವಿಧ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಮಹಿಳಾ ಮುಖಂಡರಾದ ಮೀನಾಕ್ಷಿ ಸವದಿ, ಸವಿತಾ ಹೊಸೂರ, ಅರ್ಪಿತಾ ಬಾದಾಮಿಕರ, ಜ್ಯೋತಿ ಪೇಲೆ, ಭಾರತಿ ಕೊಪ್ಪದ, ದಾನಮ್ಮ ಹಿರೇಮಠ, ವಿಜಯಲಕ್ಷ್ಮಿ ಹತಪಕಿ, ಸಂಗೀತಾ ಮರೆಗುದ್ದಿ ಸೇರಿದಂತೆ ಅನೇಕರು ಹಾಜರಿದ್ದರು.

# ಎಐಎಂಐಎಮ್ ಪಕ್ಷದ ವತಿಯಿಂದ ಅಜಾನ್ ಸ್ಪರ್ಧೆ



**ಇಲಕಲ್ :** ಮಾರ್ಚ್ 9 ರವಿವಾರ ದಿನದಂದು ನಗರದ ತಾಜ್ ಗ್ರೌಂಡ್ ನಲ್ಲಿ ಎ ಐ ಎಂ ಐ ಎಂ ಪಕ್ಷದ ವತಿಯಿಂದ ಅಜಾನ್ ಸ್ಪರ್ಧೆ ನಡೆಯಿತು ಸ್ಪರ್ಧೆಯಲ್ಲಿ 30ಕ್ಕೂ ಹೆಚ್ಚು ಸ್ಪರ್ಧಾಳುಗಳು ಭಾಗವಹಿಸಿದರು ಚಿಕ್ಕ ಮಕ್ಕಳು ಕಿರಿಯರು ಹಿರಿಯರು ನಾಲ್ಕು ನಿಮಿಷ ಸಮಯ ತೆಗೆದುಕೊಂಡು ತುಂಬಾ ಆಕರ್ಷಕವಾಗಿ ಒಳ್ಳೆಯ ಧ್ವನಿಯಲ್ಲಿ ಅಜಾನ್ ಕೊಟ್ಟರು ತುಂಬಾ ಹಿಂಪಾದ ಧ್ವನಿಯಲ್ಲಿ ಆಜಾನ್ ಹೇಳಿ ನೆರೆದಿದ್ದ ತುಂಬು ಸಭೆಯಲ್ಲಿ ಸಬೀಕರ ಗಮನ ಸೆಳೆದರು ಬಹಳಷ್ಟು ಮುಸ್ಲಿಂ ಸಮಾಜದ ಸಮಾಜ ಬಾಂಧವರು ಉಪಸ್ಥಿತರಿದ್ದರು ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಇಲಕಲ್ ಅಂಜುಮನ್ ಸಂಸ್ಥೆಯ ಅಧ್ಯಕ್ಷರಾದ ಅಲ್ಹಾಜ್ ಉಸ್ಮಾನ್ ಗನಿ ಹುಮ್ನಾಬಾದವರು ಬಹುಮಾನವನ್ನು ವಿತರಿಸಿದರು ಪ್ರಥಮ ಬಹುಮಾನ ಆರಿಫ್ ತಡಕಲ್ ಅವರಿಗೆ 10000 ? ರೂಪಾಯಿಗಳು ದ್ವಿತೀಯ ಬಹುಮಾನ ರಿಯಾಜ್ ಪಟೇಲ್ 5000? ರೂಪಾಯಿಗಳು ತೃತೀಯ ಬಹುಮಾನ ಹಾಫಿಜ್ ಸಾಬ್ ಹುಸೇನ್ ತಟಗಾರ್ 2500? ರೂಪಾಯಿಗಳು ಅವರಿಗೆ ಲಭಿಸಿತು ಕಾರ್ಯಕ್ರಮದ ಅಧ್ಯಕ್ಷೆಯನ್ನು ಉಸ್ಮಾನ್ ಗನಿ ಹುಮ್ನಾಬಾದ್ ಅವರು ವಹಿಸಿಕೊಂಡಿದ್ದರು ಇಲಕಲ್ ನಗರದ ಗಣ್ಯ ಮಾನ್ಯರು ವೇದಿಕೆಯನ್ನು ಅಲಂಕರಿಸಿದರು ಬಿ ಎಸ್ ಖಾಜಿ ರಿಟೈರ್ಡ್ ಪ್ರಿನ್ಸಿಪಾಲರು ಜಾಮಿಯಾ ಅರಬಿಕ್ ಶಾಲೆ ಇಲಕಲ್ ಭಾಷಾ ಹುಣಚಗಿ ಚೇರ್ಮಾನರು ಅಂಜುಮನ್ ಸಂಸ್ಥೆ ಹಾಗೂ ಹೈದರ್ ಸಾಬ್ ಹಳ್ಳಿ ಗುಡುಸಾಬ ವೆಂಕಟಾಪುರ್ ದೌಲತ್ ತೇಲಿ ಹಾಗೂ ಧಾರ್ಮಿಕ ಮುಖಂಡರಾದ ಇರ್ಫಾನ್ ವೆಂಕಟಪುರ ಫಾರೂಕ್ ಉಮರಿ ಇಸಾಕ್ ಹಣಗಿ ಹಾಗೂ ನಿರ್ಣಾಯಕರಾಗಿ ಧಾರ್ಮಿಕ ಪಂಡಿತರಾದ ಖಾರಿ ಅಸ್ಲಾಂಸಾಬ್ ವೇದಿಕೆ ಮೇಲೆ ಉಪಸ್ಥಿತರಿದ್ದರು.

# ಬಜೆಟ್‌ನಲ್ಲಿ ಅಲ್ಪಸಂಖ್ಯಾತರಿಗೆ ಆದ್ಯತೆ

**ಮುಧೋಳ :** ಅಲ್ಪಸಂಖ್ಯಾತರೆಂದರೆ ಕೇವಲ ಮುಸ್ಲಿಮರಲ್ಲ, ಜೈನ, ಬೌದ್ಧ, ಸಿಖ್, ಕ್ರೈಸ್ತ ಸೇರಿದಂತೆ ಇತರ ಧರ್ಮಗಳೂ ಇದರಲ್ಲಿ ಸೇರಿವೆ. ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 16ನೇ ಬಜೆಟ್‌ನಲ್ಲಿ ವಕ್ಫ್ ಸಂಸ್ಥೆಗಳ ದುರಸ್ತಿ, ಜೀರ್ಣೋದ್ಧಾರ ಮತ್ತು ಮೂಲಸೌಕರ್ಯಕ್ಕೆ ಹೆಚ್ಚಿನ ಅನುದಾನ ನೀಡಿರುವುದು ಸ್ವಾಗತಾರ್ಹ" ಎಂದು ಬಾಗಲಕೋಟೆ ಕಾಂಗ್ರೆಸ್ ಅಲ್ಪಸಂಖ್ಯಾತ ಜಿಲ್ಲಾಧ್ಯಕ್ಷ ಶಫೀಕ ಬೇಪಾರಿ ಹೇಳಿದ್ದಾರೆ.

ಜಿಲ್ಲೆಯ ಅಲ್ಪಸಂಖ್ಯಾತರಿಗೆ ಆದ್ಯತೆ ನೀಡುವ ಮೂಲಕ ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಲು ಕಾಂಗ್ರೆಸ್ ಹೈಕಮಾಂಡ್‌ಗೆ ಒತ್ತಾಯಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ ಬಜೆಟ್‌ನಲ್ಲಿ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ವಿಶೇಷ ಗಮನ ನೀಡಲಾಗಿದೆ. ವಕ್ಫ್ ಸಂಸ್ಥೆಗಳ ದುರಸ್ತಿ ಮತ್ತು ಜೀರ್ಣೋದ್ಧಾರಕ್ಕೆ ಹೆಚ್ಚಿನ ಅನುದಾನ ಮೀಸಲಿರಿಸಲಾಗಿದೆ.



ಅಲ್ಪಸಂಖ್ಯಾತರ ಮೂಲಸೌಕರ್ಯ ಅಭಿವೃದ್ಧಿಗೆ ,ಶಿಕ್ಷಣ ಉದ್ಯೋಗಕ್ಕೆ ಒತ್ತು ನೀಡಲಾಗಿದೆ.

**ವಿಧಾನ ಪರಿಷತ್ ಸ್ಥಾನಕ್ಕೆ ಬೇಡಿಕೆ:** ಬಾಗಲಕೋಟೆ ಜಿಲ್ಲೆಯ ಅಲ್ಪಸಂಖ್ಯಾತರಿಗೆ ಪ್ರಾತಿನಿಧ್ಯ ನೀಡುವಂತೆ ಕಾಂಗ್ರೆಸ್ ಹೈಕಮಾಂಡ್‌ಗೆ ಮನವಿ ಸಲ್ಲಿಸಲಾಗಿದೆ.

ಜಿಲ್ಲೆಯ ಅಲ್ಪಸಂಖ್ಯಾತರ ಅಭಿವೃದ್ಧಿಗೆ ವಿಧಾನ ಪರಿಷತ್ ಸದಸ್ಯರ ಆಯ್ಕೆ ಅಗತ್ಯ ಎಂದು ಶಫೀಕ ಬೇಪಾರಿ ಮನವಿ ಮಾಡಿಕೊಂಡಿದ್ದಾರೆ.



**ರಬಕವಿ–ಬನಹಟ್ಟಿ : ತಾಲ್ಲೂಕಿನ ಜಗದಾಳ ಗ್ರಾಮದ ಕಾನಟ್ಟಿ ತೋಟದ ಪ್ರಾಥಮಿಕ ಶಾಲೆಯಲ್ಲಿ ಮಹಿಳಾ ದಿನಾಚರಣೆಯ ಸಂದರ್ಭದಲ್ಲಿ ವಿದ್ಯಾರ್ಥಿನಿಯರು ಮತ್ತು ಶಿಕ್ಷಕರು ಭಾಗವಹಿಸಿದ್ದರು. ಮುಖ್ಯ ಶಿಕ್ಷಕ ರಾಮಣ್ಣ ವಡ್ಡರ, ಸಿದ್ರಾಮಯ್ಯ ಮಠ ಮತ್ತು ರವೀಂದ್ರ ಸಂಪಗಾಂವಿ ಉಪಸ್ಥಿತರಿದ್ದರು.**

# ಶಾಂತಿ ಮತ್ತು ಸುವ್ಯವಸ್ಥೆಗಾಗಿ ಸಾರ್ವಜನಿಕರ ಸಹಕಾರ ಮುಖ್ಯ

## ಶಾಂತ ರೀತಿಯಿಂದ ಹಬ್ಬಗಳನ್ನು ಆಚರಿಸಿ। ನೀರಿನ ಮೂಲಗಳನ್ನು ಕೆಡಿಸಬೇಡಿ

**ರಬಕವಿ–ಬನಹಟ್ಟಿ :** ಹೋಳಿ ಹಬ್ಬದ ಸಂದರ್ಭದಲ್ಲಿ ಕೇವಲ ನೈಸರ್ಗಿಕ ಬಣ್ಣಗಳಿಂದ ಮಾತ್ರ ಬಣವನ್ನು ಆಡಿರಿ. ನಂತರ ನೀರಿನ ಮೂಲಗಳನ್ನು ಕೆಡಿಸಬೇಡಿ. ಪಿಯುಸಿ ಪರೀಕ್ಷೆಗಳು ನಡೆದಿವೆ.

ಪರೀಕ್ಷೆಗೆ ಹೋಗುವ ಪರೀಕ್ಷಾರ್ಥಿಗಳಿಗೆ ತೊಂದರೆಯಾಗದಂತೆ ಹಬ್ಬವನ್ನು ಆಚರಿಸಿ. ಶಾಂತಿ ಮತ್ತು ಸುವ್ಯವಸ್ಥೆಗಾಗಿ ಪೊಲೀಸ್ ಇಲಾಖೆಯ ಜೊತೆಗೆ ಸಾರ್ವಜನಿಕರ ಸಹಕಾರ ಕೂಡಾ ಮುಖ್ಯವಾಗಿದೆ ಎಂದು ಸ್ಥಳೀಯ ಸಿಪಿಐ ಸಂಜೀವ ಬಳಗಾರ ತಿಳಿಸಿದರು.

ಅವರು ಸೋಮವಾರ ಸಂಜೆ ಬನಹಟ್ಟಿಯ ಪೊಲೀಸ್ ಠಾಣೆಯಲ್ಲಿ ಹೋಳಿ ಹಬ್ಬದ ಅಂಗವಾಗಿ ಹಮ್ಮಿಕೊಂಡ ಶಾಂತಿ ಪಾಲನಾ ಸಭೆಯಲ್ಲಿ ಮಾತನಾಡಿದರು.

ಪಿಎಸ್ಐ ಶಾಂತಾ ಹಳ್ಳಿ, ಭಾರತೀಯ ಹಬ್ಬಗಳ ಮಹತ್ವವನ್ನು ಅದರ ಸಾರವನ್ನು ಇಂದಿನ ಯುವಕರಿಗೆ ತಿಳಿಸಬೇಕು.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕ್ರಮ ತೆಗೆದುಕೊಳ್ಳಿ. ರಾತ್ರಿಯ ಸಮಯದಲ್ಲಿ ಬಹಳಷ್ಟು ಹೊತ್ತಿನವರೆಗೆ ಹಲಗೆ ನುಡಿಸಬೇಡಿ ಎಂದು ತಿಳಿಸಿದರು.

ಶಾಂತಿ ಪಾಲನಾ ಸಭೆಯ ಅಧ್ಯಕ್ಷ ಸಿದ್ದನಗೌಡ ಪಾಟೀಲ, ಮಂಗಳವಾರ ಪೇಟೆ ದೈವ ಮಂಡಳಿಯ ಕಾರ್ಯಾಧ್ಯಕ್ಷ ಶ್ರೀಶೈಲ ಧಬಾಡಿ, ಸೋಮವಾರ ಪೇಟೆಯ ದೈವ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ತುಂಗಳ, ಮುಸ್ಲಿಂ ಸಮಾಜದ ಮುಖಂಡ ಡಾ. ಅಕ್ಬರ್ ತಾಂಬೋಳಿ, ರಾಮಪುರದ ಹಿರಿಯರಾದ ಪ್ರಕಾಶ ಸಿಂಗನ ಮತ್ತು ರಬಕವಿ–ಬನಹಟ್ಟಿ ಸ್ಥಾಯಿ ಸಮಿತಿ ಚೇರಮನ್ನರಾದ ಅರುಣ ಬುದ್ನಿ ಮಾತನಾಡಿದರು.

ದಾನಪ್ಪ ಹುಲಜತ್ತಿ, ಬುಡನ್ ಜಮಾದಾರ, ಈಶ್ವರ ಕಾಡದೇವರ, ಶ್ರೀಶೈಲ ಬೀಳಗಿ, ಅಶೋಕ ರಾವಳ, ಶಿವಾನಂದ ಕಾಗಿ, ರವಿ ಕೊರ್ತಿ, ವಿಜಯ ಕಲಾಲ, ವಿರುಪಾಕ್ಷಯ್ಯ ಮಠದ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

**"SIHI KAHI"** Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State

Designed by MKG-9535762618